ಪ್ರಸ್ತಾವ ಅಂಗೀಕಾರ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :— ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

``2000ದ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು :— ಮಾನ್ಯ ಚಂದ್ರೇಗೌಡರೇ, ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ 2000 ಇದರ ಪರ್ಯಾಲೋಚನಾ ಪ್ರಸ್ತಾವವನ್ನು ಮಂಡಿಸಬೇಕು.

(2) ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ 2000

ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 2000 ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು :— ಇವತ್ತು ನಡೆದಂತಹ ಬಿ.ಎ.ಸಿ ಮೀಟಿಂಗ್‌ನಲ್ಲಿ ಈ ಬಿಲ್‌ನ ಚರ್ಚೆಗೆ ಎಂದು ಎರಡು ಗಂಟೆಗಳ ಕಾಲಾವಧಿಯನ್ನು ನಿಗದಿ ಮಾಡಲಾಗಿದೆ.

ಶ್ರೀ ಬಿ. ಸೋಮಶೇಖರ್ :— ನಾನು ತಮಗೆ ಒಂದು ಸಲಹೆಯನ್ನು ಕೊಡುತ್ತೇನೆ, ತಾವು ಈಗ ತಂದಿರುವ ಪ್ರಪೋಸಲ್‌ಗೆ ಈ ಬಿಲ್ ಅವಶ್ಯಕತೆ ಇರುವುದಿಲ್ಲ. ನಾವು ಇಷ್ಟೊಂದು ಸರ್ಕಸ್ ಮಾಡುವ ಅವಶ್ಯಕತೆ ಇಲ್ಲ. ತಾವು ಕೇಳುವುದಾದರೆ ನಾನು ಎರಡು ನಿಮಿಷದಲ್ಲಿ ಹೇಳುತ್ತೇನೆ, ತಾವು ರೂಲ್ಸ್‌ಗೆ ಅಮೆಂಡ್‌ಮೆಂಟ್ ತರುತ್ತಿದ್ದೀರಿ.

ಶ್ರೀ ಕರಿಯಣ್ಣ :— ಮಾನ್ಯ ಕಾನೂನು ಸಚಿವರು ಇನ್ನು ಬಿಲ್ ಮಂಡಿಸಿಯೇ ಇಲ್ಲ, ಇವರು ಆಗಲೇ ಚರ್ಚೆಯನ್ನು ಮಾಡುತ್ತಿದ್ದಾರೆ.

*(ಗೊಂದಲ)*

ಶ್ರೀ ಬಿ. ಸೋಮಶೇಖರ್ :— ನಿಮಗೆ ಗೊತ್ತಾಗುವುದಿಲ್ಲ ಕುಳಿತುಕೊಳ್ಳಿ. ನಿಮ್ಮ ಮಂತ್ರಿಗಳಿಗೆ ನಾನು ಅರ್ಥ ಮಾಡಿ ಹೇಳುತ್ತೇನೆ.

ಶ್ರೀ ಕರಿಯಣ್ಣ :— ಗೊತ್ತಾಗುವುದಿಲ್ಲವೆಂದರೆ ಏನು ಅರ್ಥ?

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :— ಮಾನ್ಯ ಅಧ್ಯಕ್ಷರೆ, ಈ ಒಂದು ವಿಚಾರದಲ್ಲಿ ನಿಮ್ಮ ಕಾನೂನು ಅಧಿಕಾರಿಗಳಿಂದ ಯಾವ ರೀತಿಯಾದ ಸಲಹೆಯನ್ನು ಪಡೆದುಕೊಂಡು ಏನು ತೀರ್ಮಾನ ತೆಗೆದುಕೊಂಡಿದ್ದಿರೋ ನನಗೆ ಅರ್ಥವಾಗುತ್ತಿಲ್ಲ. ಸುಪ್ರೀಂಕೋರ್ಟಿನಲ್ಲಿ ಇದನ್ನು ವಜಾ ಮಾಡಿದ್ದು ಯಾವ ವಿಚಾರಕ್ಕೆಂದರೆ, 10 ಪರ್ಸೆಂಟ್ ಮಾರ್ಕ್ಸ್‌ನ್ನು ಸೇರಿಸಿದ್ದಕ್ಕೆ ಸಂವಿಧಾನದಲ್ಲಿ ಅವಕಾಶವಿಲ್ಲವೆಂದು ವಜಾ ಮಾಡಿದರು. 10% marks were added to the already secured marks. Therefore it was dismissed saying that, that was not permissible under the Constitution. ಅದಕ್ಕೆ ಇವರು ಒಂದು ಕಮಿಟಿಯನ್ನು ರಚನೆ ಮಾಡಿದರು, ಜಸ್ಟೀಸ್ ರಾಮಕೃಷ್ಣರವರ ಸಮಿತಿ ಒಂದು ವರದಿಯನ್ನಿ ಕೊಟ್ಟಿರುತ್ತಾರೆ. ``... and Commission has given a report recommending for providing 5% reservation over and above the existing 50% reservation and make a law in this behalf." That means, any reservation should not exceed 50% ಅಂದ ಹಾಗೆ We all know about it. ಆದ್ದರಿಂದ ಈ ಬಿಲ್ ಅವಶ್ಯಕತೆ ಇರುವುದಿಲ್ಲವೆಂದು ನಾನು ಹೇಳುತ್ತೇನೆ. ಅರ್ಧಗಂಟೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. 10 ಪರ್ಸೆಂಟ್ ಮಾರ್ಕ್ಸ್‌ನ್ನು ಸುಪ್ರೀಂ ಕೋರ್ಟಿನವರು ಕಿತ್ತು ಹಾಕಿದ ಕಾರಣವೇನೆಂದರೆ, ಮೀಸಲಾತಿ 50 ಪರ್ಸೆಂಟ್‌ಗಿಂತ ಎಕ್ಸೀಡ್ ಆಗುತ್ತದೆ ಎಂದು. ಸಂವಿಧಾನದ ಪ್ರಕಾರ ಮೀಸಲಾತಿ ಪ್ರಮಾಣ 50 ಪರ್ಸೆಂಟ್‌ಗಿಂತ ಜಾಸ್ತಿ ಆಗಬಾರದೆಂದು ಕೂಡ INDRA SAHANAI ಕೇಸ್‌ನಲ್ಲಾಗಿದೆ. ಇದು ಸುಪ್ರೀಂಕೋರ್ಟ್‌ನವರ ಮಾದ. ಅದರ ವಿರುದ್ಧ ತಾವು ಕಮೀಷನ್ ರಚನೆಯನ್ನು ಮಾಡಿರುತ್ತೀರಿ. ಅವರು ವರದಿಯಲ್ಲಿ ಏನು ಕೊಟ್ಟಿದ್ದಾರೆಂದರೆ, the Commission has given a report recommending 5% reservation... ನಾನು ತಮಗೆ ಇದರ ಬಗ್ಗೆ ಕನ್‌ವಿನ್ಸ್ ಮಾಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ :— ಆಗ ನೀವು ಕನ್‌ವಿನ್ಸ್ ಮಾಡಬೇಕಾಗಿತ್ತು.

(Interruptions)

Sri D.B. Chandregowda :— You should have convinced at the time of introduction. The bill has been introduced and we have taken it up for consideration.

ಅಧ್ಯಕ್ಷರು :— ಮಾನ್ಯ ಸೋಮಶೇಖರವರೆ, ತಾವು ಬಿಲ್ ಮಂಡನೆ ಮಾಡುವಾಗಲೇ ಹೇಳಬೇಕಾಗಿತ್ತು. ನಿನ್ನೆ ಬಿಲ್ ಮಂಡನೆಯಾಗಿದೆ.

ಶ್ರೀ ಬಿ. ಸೋಮಶೇಖರ್ :— ಆಗ ತಾವು ಮೊದಲು ಬಿಲ್ ಮಂಡನೆ ಮಾಡೋಣವೆಂದು ಹೇಳಿದಿರಿ. ಆ ಸಮಯದಲ್ಲಿ ನಾನು ಇದರ ಬಗ್ಗೆ ಹೇಳಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು) :— ಮಾನ್ಯ ಅಧ್ಯಕ್ಷರೆ, ನಮ್ಮ ದೇಶದಲ್ಲಿ ಶೇಕಡಾ 80ಕ್ಕೂ ಹೆಚ್ಚು ಜನರು ಗ್ರಾಮೀಣ ಪ್ರದೇಶದಲ್ಲಿದ್ದಾರೆ. ಶೇಕಡಾ 60ಕ್ಕೂ ಹೆಚ್ಚು ಜನರು ವ್ಯವಸಾಯವನ್ನು ಮಾಡಿಕೊಂಡು ಬದುಕಿದ್ದಾರೆ. ಆದರೆ ಶೇಕಡಾ 80ಕ್ಕೂ ಹೆಚ್ಚು ಜನರ ಧ್ವನಿ, ಕೇಂದ್ರ ಸರ್ಕಾರಕ್ಕೆ, ಸಂವಿಧಾನ ರಚನೆಕಾರರಿಗೆ ಹಾಗೂ ರಾಷ್ಟ್ರದ ಸಮಸ್ಯೆಗಳನ್ನು ಎತ್ತಿಕೊಂಡು ಚರ್ಚೆ ಮಾಡತಕ್ಕಂಥವರಿಗೆ ಕೇಳಿಸಲಿಲ್ಲ. ದುರಾದೃಷ್ಟವಶಾತ್ ಶೇಕಡ 80 ಭಾಗದ ಜನರಿಂದ ಆಯ್ಕೆಯಾದ 90ರಷ್ಟು ಜನರು ಈ ಶಾಸನಸಭೆಯಲ್ಲಿದ್ದೇವೆ. ಯಾವ ರೀತಿಯಾಗಿ ಈ ವಿಚಾರವನ್ನು ತೆಗೆದುಕೊಳ್ಳಬೇಕು. ಎಲ್ಲಿಯವರೆಗೆ ನಾವು ಗ್ರಾಮಾಂತರ ಪ್ರದೇಶದ ಜನರ ತೊಂದರೆಗಳನ್ನು ಅರಿಯಬೇಕಾಗಿದೆ, ಈ ಬಿಲ್ ತೆಗೆದುಕೊಳ್ಳುವುದಕ್ಕೆ ಸಾಯಂಕಾಲ 7 ಗಂಟೆಯಾಗುತ್ತದೆ. ನಮ್ಮ ವ್ಯವಸ್ಥೆಯಲ್ಲಿ ಗ್ರಾಮೀಣ ಜನರ ಬಗ್ಗೆ ಆಲೋಚನೆ ನಡೆದಿದೆ ಎನ್ನುವುದಕ್ಕೆ ಇದೊಂದು ಸಾಕ್ಷಿ. ಈ ಮಸೂದೆ ತರುವುದಕ್ಕೆ ಕಾರಣವೇನು? ಮೊಟ್ಟಮೊದಲನೆಯದಾಗಿ ಕಾಂಗ್ರೆಸ್ ಸರ್ಕಾರ ಇದ್ದಾಗ - ದಿನಾಂಕ: 31-3-1992ನೇ ಇಸ್ವಿಯಲ್ಲಿ ಗ್ರಾಮೀಣ ಪ್ರದೇಶ ಸಮಸ್ಯೆಯನ್ನು ಅರ್ಥಮಾಡಿಕೊಂಡು ಏನಾದರೊಂದು ಪರಿಹಾರವನ್ನು ಅವರಿಗೆ ಕೊಡಬೇಕು. ರಾಜ್ಯದ ಆಡಳಿತದಲ್ಲಿ ಅವರಿಗೆ ಸಲ್ಲಬೇಕಾದ ಪಾಲನ್ನು ನಾವು ಕೊಡಬೇಕು, ಆದರೆ ಅದು ಸಾಧ್ಯವಾಗಿರುವುದಿಲ್ಲ. ಏಕೆಂದರೆ ವ್ಯವಸ್ಥೆ ಅದರ ವಿರುದ್ಧವಾಗಿದೆ. ಆದ್ದರಿಂದ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ನಮ್ಮಿಂದ ಸಾಧ್ಯವಾಗದಿದ್ದರೆ ರಾಜ್ಯ ಸರ್ಕಾರದ ಇತಿಮಿತಿಯಲ್ಲಿ ಎಲ್ಲಿಯಾದರು ಒಂದು ವೆಯಿಟೇಜ್‌ನ್ನು ಕೊಟ್ಟು, ಆಡಳಿತದ ಒಂದು ವಿಭಾಗದಲ್ಲಿ ಪಾಲುದಾರರನ್ನಾಗಿ ಮಾಡಬೇಕೆಂದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿ ದಿನಾಂಕ: 31-3-1992ನೇ ಸಾಲಿನಲ್ಲಿ ಗ್ರೂಪ್ ಸಿ-ಡಿ ಹುದ್ದೆಗಳಿಗೆ 15 ಅಂಕಗಳನ್ನು ಮಾತ್ರ ಕೊಟ್ಟಿರುತ್ತಾರೆ. ಗ್ರಾಮೀಣ ಪ್ರದೇಶದ ಜನರು ಯಾರು? ಆಗ ಗ್ರಾಮೀಣ ಪ್ರದೇಶವನ್ನು ನಿಗದಿಪಡಿಸಲಿಲ್ಲ ಜನಸಂಖ್ಯೆಯನ್ನು ನಿಗದಿಪಡಿಸಿದರು. 20 ಸಾವಿರ ಜನಸಂಖ್ಯೆ ಇದ್ದರೆ ಅದು ಗ್ರಾಮೀಣ ಪ್ರದೇಶ; ಇದಕ್ಕೆ ಏನು ಆಧಾರ ಎನ್ನುವುದು ನನಗೆ ಗೊತ್ತಾಗಲಿಲ್ಲ. ಜನಸಂಖ್ಯೆಯ ಜೊತೆಗೆ ಮೌಲ್ಯಮಾಪನ ಮಾಡುವಾಗ

ಎಸ್‌ಎಸ್‌ಎಲ್‌ಸಿ ಮಿತಿಯಾಗಿತ್ತು. ಇದು ಸಾಕಷ್ಟು ಚರ್ಚೆಗೆ ಗ್ರಾಸವಾಯಿತು. ಬಹುಶ: ಸದನದಲ್ಲಿ ಸುದೀರ್ಘವಾಗಿ ಚರ್ಚೆ ನಡೆದು ದಿನಾಂಕ: 28-4-1997ರಂದು ಇದನ್ನು ಮರುಪರಿಶೀಲನೆ ಮಾಡಿತು. ಇದನ್ನು ಮರುಪರಿಶೀಲನೆ ಮಾಡುವಾಗ 15 ಅಂಕಗಳನ್ನು ಬಿಟ್ಟು, ಎಸ್‌ಎಸ್‌ಎಲ್‌ಸಿಯವರೆಗೆ ಯಾರು ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾನೆ ಅವನನ್ನು ನೇರ ನೇಮಕಾತಿ ಮಾಡುವಾಗ, ಅವನು ಪಡೆದಿರತಕ್ಕಂಥ ಅಂಕಗಳ ಶೇಕಡಾ 10ರಷ್ಟನ್ನು ಸೇರಿಸಬೇಕೆಂದು ಪರಿವರ್ತನೆಯಾಯಿತು. ಇದನ್ನು ಗ್ರೂಪ್ ಸಿ-ಡಿಗೆ ಬಿಟ್ಟಿದ್ದರೆ ಏನಾಗುತ್ತಿತ್ತೋ ನನಗೆ ಗೊತ್ತಿಲ್ಲ. ಕರ್ನಾಟಕದಲ್ಲಿ ಮೊದಲನೇ ಪ್ರಯತ್ನ ಆ ಸಮಯದಲ್ಲಿ ನಡೆದಿತ್ತು. ಅದರ ಪರಿಣಾಮವಾಗಿ ಸಾವಿರಾರು ಜನ ಗ್ರಾಮೀಣ ಪ್ರದೇಶದ ಮಕ್ಕಳು ಈ ಒಂದು ನೇರ ನೇಮಕಾತಿ ಲಾಭವನ್ನು ಪಡೆದುಕೊಳ್ಳಲು ಸಾಧ್ಯವಾಯಿತು ಎನ್ನುವ ಸತ್ಯವನ್ನಾದರೂ ತಾವು ಒಪ್ಪಿಕೊಳ್ಳಬೇಕು. ಆದ್ದರಿಂದ ಇದು ಕಡಿಮೆಯಾಗುತ್ತದೆ ಎನ್ನುವ ಕಾರಣಕ್ಕಾಗಿ ಶೇಕಡ 10ಕ್ಕೆ ಇದನ್ನು ಮಾರ್ಪಾಡು ಮಾಡಲಾಯಿತು. ನನ್ನಲ್ಲಿರುವ ಅಂಕಿ ಅಂಶಗಳ ಪ್ರಕಾರ ನಾನು ಹೇಳುತ್ತೇನೆ. ಇದರಲ್ಲಿ ವ್ಯತ್ಯಾಸ ತಾಂತ್ರಿಕವಲ್ಲ, ಇದರ ಒಟ್ಟಾರೆ ಮೂಲ ಉದ್ದೇಶ ತಮಗೆ ಸಮಾಧಾನ ತಂದಿದೆ ಎನ್ನುವುದಾದದರೆ ಇದರ ಬಗ್ಗೆ ಚರ್ಚೆಯನ್ನು ಮಾಡೋಣ. ಯಾರು ಮಾಡಿದರು ಏನು ಮಾಡಿದರು ಎನ್ನುವ ಬಗ್ಗೆ ಆಮೇಲೆ ಚರ್ಚೆಯನ್ನು ಮಾಡೋಣ. ದಿನಾಂಕ : 28-4-1997ರಲ್ಲಿ ಶೇಕಡಾ 10ಕ್ಕೆ ಮಾರ್ಪಾಡು ಮಾಡಲಾಯಿತು. ಇದರ ಜೊತೆಗೆ ಗ್ರೂಪ್ ಎ-ಬಿಯನ್ನು ಸೇರಿಸಲಾಯಿತು. ಆಗಲೂ ಕೂಡ ಜನಸಂಖ್ಯೆ ಆಧಾರ ಯಾವ ರೀತಿಯಾಗಿರಬೇಕು ಎಂದು 20 ಸಾವಿರ ಜನಸಂಖ್ಯೆ ಇರುವುದನ್ನು ಪುನ: ಪರಿಶೀಲಿಸಲಾಯಿತು. 1999ನೇ ಸೆಪ್ಟೆಂಬರ್‌ನಲ್ಲಿ 50 ಸಾವಿರ ಜನಸಂಖ್ಯೆ ಇರುವ ಪ್ರದೇಶಕ್ಕೂ ಇದನ್ನು ವಿಸ್ತರಿಸಲಾಯಿತು. ಎ-ಬಿ ಗ್ರೂಪ್‌ಗೆ ಅವಕಾಶವನ್ನು ಮಾಡಿಕೊಟ್ಟಿರುವುದರಿಂದ ಇದನ್ನು ನ್ಯಾಯಾಲಯದಲ್ಲಿ ವಜಾ ಮಾಡಿತು. ರಿಟ್ ಪಿಟಿಷನ್ ನಂ:13157:98 ಇದನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಲಾಯಿತು. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:11-11-1998ರಲ್ಲಿ ಸರ್ಕಾರದ ಆದೇಶವನ್ನು ಅನೂರ್ಜಿತಗೊಳಿಸಿತು. ಆಗ ಏನು ಮಾಡಬೇಕೆಂದು ಎಲ್ಲರೂ ಎಚ್ಚರಗೊಂಡು, ಸರ್ಕಾರ ಇದರ ವಿರುಧವಾಗಿ ವಿಭಾಗೀಯ ಪೀಠಕ್ಕೆ ಮೇಲ್ಮನವಿಯನ್ನು ಸಲ್ಲಿಸಲಾಯಿತು. ವಿಭಾಗೀಯ ಪೀಠ ದಿನಾಂಕ : 26-11-1998ರಲ್ಲಿ ಏಕಸದಸ್ಯ ಪೀಠ ಏನು ನ್ಯಾಯದಾನವನ್ನು ಮಾಡಿತ್ತು ಅದೇ ಸರಿ ಎಂದು ತೀರ್ಮಾನಿಸಿತು. ಇದನ್ನು ಇಲ್ಲಿಗೆ ನಿಲ್ಲಿಸಲು ಸಾಧ್ಯವಿಲ್ಲವೆಂದು ಹೇಳಿ ಇದರಿಂದ ಬಾಧಿತವಾದ ಸರ್ಕಾರ ಸುಪ್ರೀಂಕೋರ್ಟಿನಲ್ಲಿ ಸ್ಪೆಷಲ್ ರಿಟ್ ಪಿಟಿಷನ್ ಹಾಕಬೇಕೆನ್ನುವ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಇದರಿಂದ ಬಾಧಿತವಾದಂಥ

*7.00 ಪಿ.ಎಂ.*

ಸರ್ಕಾರ ಅದನ್ನು ಇಲ್ಲಿಗೆ ನಿಲ್ಲಿಸಲು ಸಾಧ್ಯವಿಲ್ಲವೆಂದು ಹೇಳಿ, ಸುಪ್ರೀಂ ಕೋರ್ಟಿಗೆ ಸ್ಪೆಷಲ್ ಲೀವ್ ಪಿಟಿಷನ್ ತೆಗೆದುಕೊಂಡು ಹೋಗಬೇಕು ಎಂದು ತೀರ್ಮಾನ ಮಾಡಿ,

ರಿಟ್ ಪಿಟಿಷನ್ ಸಂಖ್ಯೆ: 2065, 2084ರಲ್ಲಿ ಸ್ಪೆಷಲ್ ಲೀವ್ ಪಿಟಿಶನ್ ಅನ್ನು ಸಲ್ಲಿಸಿತು. ಆದರೆ ಸುಪ್ರೀಂ ಕೋರ್ಟ್ ದಿನಾಂಕ: 14-2-2000ರಂದು ಮೇಲಿನ ಎಸ್.ಎಲ್.ಪಿ.ಯನ್ನು ವಜಾ ಮಾಡಿತು. ಹಾಗಾಗಿ ಉಚ್ಚ ನ್ಯಾಯಾಲಯದ ತೀರ್ಪು ಏನಿತ್ತೋ, ಅದೇ ಸಿಂಧುವಾಯಿತು. ತೀರ್ಪು ಬಂದಿದ್ದು 14-2-2000ದಂದು. ತೀರ್ಪು ಬಂದ ಎರಡೇ ದಿವಸಗಳಲ್ಲಿ ಅಂದರೆ 16-2-2000ದಂದು ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಯನ್ನು ಕರೆದರು. ಮುಂದೆ ಏನು ಮಾಡಬೇಕು ಎನ್ನುವ ಬಗ್ಗೆ ಚರ್ಚೆ ಮಾಡಲು ಸಭೆಯನ್ನು ಕರೆದರು. ಆದಾದ ಮಾರನೇ ದಿನವೇ, ಅಂದರೆ, 17-2-2000ದಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಇದರ ಬಗ್ಗೆ ಸುದೀರ್ಘವಾದಂಥ ಚರ್ಚೆ ನಡೆಯಿತು. ಚರ್ಚೆಯಲ್ಲಿ, ಮಾನ್ಯ ಸೋಮಶೇಖರರವರು ಹೇಳುತ್ತಿದ್ದ ಹಾಗೆ, ಇದು 14, 15, ಮತ್ತು 16ನೇ ವಿಧಿಗಳಿಗೆ ಬಾಧಕವಾಗುತ್ತದೆ ಎನ್ನುವ ವಿಚಾರ ಬಂತು ಈ ಬಾಧಕವನ್ನು ತಪ್ಪಿಸಿಕೊಂಡ ಜನರಿಗೆ ಸಹಾಯ ಮಾಡುವುದು ಹೇಗೆ? ಈ ಬಾಧಕವಾಗುವುದಕ್ಕೆ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಗಳು ಕೊಟ್ಟ ಕಾರಣವೆಂದರೆ ಮಾಹಿತಿಗಳು ಸರಿಯಾಗಿಲ್ಲ. ಅಂದರೆ, ಗ್ರಾಮೀಣ ಪ್ರದೇಶದ ಜನ ಎಂದರೆ ಯಾರು? ಅವರ ವಿದ್ಯಾರ್ಹತೆಯಲ್ಲಿ ಇಷ್ಟು ಲೋಪ ಬರುವುದಕ್ಕೆ ಕಾರಣವೇನು? ಹೀಗೆ ಅನೇಕ ವಿಚಾರಗಳನ್ನು ಅವರು ಹೇಳಿದರು. ನಂತರ ಅವುಗಳ ವಿಚಾರಣೆಗೆ ಹೋಗೋಣ. ನಿಮ್ಮಿಂದ ನನಗೆ ಸಾಕಷ್ಟು ಬೆಳಕು ಸಿಕ್ಕಿದರೆ ಏನು ಮಾಡಬೇಕು ಎನ್ನುವುದನ್ನು ಆಲೋಚನೆ ಮಾಡೋಣ. ಅದಕ್ಕಾಗಿ, ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ರಚಿಸಬೇಕು ಎಂದು ನಮ್ಮ ಮಂತ್ರಿಮಂಡಲದ ಸಭೆ ತೀರ್ಮಾನಿಸಿತು. ಆ ತೀರ್ಮಾನದ ಹಿನ್ನಲೆಯಲ್ಲಿ ವಿರೋಧ ಪಕ್ಷದ ನಾಯಕರುಗಳ ಜೊತೆಯಲ್ಲೂ ಚರ್ಚೆ ಮಾಡಿದೆವು. ಈ ಮಸೂದೆಯನ್ನು ಸರ್ಕಾರವೇ ಮಂಡಿಸಿದ್ದಲ್ಲ. ಎಲ್ಲರ ಅಭಿಪ್ರಾಯವನ್ನು ಪಡೆದು, ಇದಕ್ಕೆ ಏನಾದರೊಂದು ಪರಿಹಾರ ಮಾಡಬೇಕು ಎನ್ನುವ ಸದಿಚ್ಛೆಯಿಂದ 15-9-2000ರಂದು ನ್ಯಾಯಮೂರ್ತಿ ಶ್ರೀ ರಾಮಕೃಷ್ಣರವರ ಅಧ್ಯಕ್ಷತೆಯಲ್ಲಿ ಇಬ್ಬರು ಸದಸ್ಯರನ್ನೊಳಗೊಂಡ ತ್ರಿಮೂರ್ತಿಗಳ ಆಯೋಗವನ್ನು ನೇಮಕ ಮಾಡಿ, ಅದಕ್ಕೆ ಟರ್ಮ್ಸ್ ಆಫ್ ರೆಫರೆನ್ಸ್ ಅನ್ನು ಕೊಟ್ಟಿದ್ದೇವೆ. ಆ ಟರ್ಮ್ಸ್ ಆಫ್ ರೆಫರೆನ್ಸ್ ಏನು ಎನ್ನುವುದನ್ನು ನಾನು ಕೊಡುತ್ತೇನೆ. ಸರ್ವೋಚ್ಚ ನ್ಯಾಯಾಲಯ ಯಾವುದಕ್ಕೆ ಬಾಧಕವಾಗುತ್ತದೆ ಎಂದು ಹೇಳಿತ್ತು, ಆ ಹಿನ್ನಲೆಯಲ್ಲಿ ಅವುಗಳನ್ನು ಸರಿಯಾಗಿ ಪರಿಶೀಲನೆ ಮಾಡುವುದಕ್ಕಾಗಿ ಟರ್ಮ್ಸ್ ಆಫ್ ರೆಫರೆನ್ಸ್ ಅನ್ನು ಕೊಟ್ಟು ಈ ಆಯೋಗವನ್ನು ನೇಮಕ ಮಾಡಿದೆವು. Based on the findings referred above, the Commission recommended the following: 15-9-2000ರಂದು ಆ ಶಿಫಾರಸ್ಸುಗಳು ಸರ್ಕಾರದ ಕೈಸೇರಿತು. ಶಿಫಾರಸ್ಸುಗಳಲ್ಲಿ ಮುಖ್ಯವಾಗಿ ಏನು ಹೇಳಿದ್ದಾರೆ ಎಂದರೆ, The population of a place cannot be the basis for treating as rural. ಅಂದರೆ 20 ಸಾವಿರ ಜನಸಂಖ್ಯೆ, 50 ಸಾವಿರ ಜನಸಂಖ್ಯೆ

ಎಂದು ಹಿಂದೆ ಮಾಡಿದುದೆಲ್ಲಾ ಆಧಾರವಾಗುವುದಿಲ್ಲ. ಹಾಗಾದರೆ ಆಧಾರ ಏನು ಆಗಬೇಕು? The word ``rural" has a definite connotation in the Indian set-up. It has to be predominantly agricultural. It is an accepted fact. It has to be ``predominantly agricultural." This is also the basis for considering a place as a village or place having rural characteristics and this has to be adopted for census purposes and we feel that the same basis should be adopted for this purpose also. ಸೆನ್ಸಸ್ ಪರ್ಪಸ್‌ಗೆ ಸುಮಾರು 5 ಸಾವಿರ ಜನಸಂಖ್ಯೆ ಇರತಕ್ಕಂಥ ಪ್ರದೇಶವನ್ನು ಒಂದು ಹಳ್ಳಿ ಎಂದು ಹೇಳುತ್ತೇವೆ. ಹಾಗಾದರೆ, ಅದಷ್ಟೇ ಗ್ರಾಮವೇ? ರೆಕಮೆಂಡೇಷನ್ ಅನ್ನು ನೋಡುವಾಗಲೂ ಕೂಡ ನಾವು ಆಲೋಚನೆ ಮಾಡಬೇಕು. ಆದೂ ಅಲ್ಲ. Based on the detailed discussion made in Chapters 3, 4, 5, 6 and 7, the Commission has come to the conclusion that instead of Rural weightage of marks, a separate reservation of 5% is found necessary to a class of people due to its peculiar characteristic as discussed in Chapter 7. ಇಲ್ಲಿ ತಾವು ಹೇಳಿದಂತೆ ಇಂದಿರಾ ಸಹನಿ ಪ್ರಕರಣ ಅಡ್ಡಿ ಬರುತ್ತದೆ. ಶೇಕಡ 50ಕ್ಕಿಂತ ಮೇಲೆ ಹೋದರೆ ಅದು ರಾಜ್ಯಾಂಗದ 16(4)ನೇ ವಿಧಿಗೆ ವಿರುದ್ಧವಾಗುತ್ತದೆ ಎನ್ನುವ ಬಗ್ಗೆ ಒಂದು ತೀರ್ಪು ಇದೆ. ಆ ತೀರ್ಪನ್ನು ಗೆಟ್-ಓವರ್ ಮಾಡುವುದು ಹೇಗೆ ಎಂದು ನಾವು ಸಮಾಲೋಚನೆ ಮಾಡಿದೆವು. Since the Commission suggested separate resevation of 5% and the person selected from this category is a separate entity and they should be allowed to take away the legitimate posts reserved to other reserved categories, the benefit of rural reservation should be extended to all groups including Group A and Group B. ಅವರು ಶೇಕಡ 5ರಷ್ಟು ಮೀಸಲಾತಿಯ ಬಗ್ಗೆ ಹೇಳಿದ್ದಾರೆ. ಆದರ ಜೊತೆಗೆ, ಗ್ರೂಪ್-ಎ ಮತ್ತು ಬಿಗಳಿಗೂ ಈ ಮೀಸಲಾತಿಯನ್ನು ವಿಸ್ತರಿಸಬೇಕು ಎನ್ನುವ ಮಾತನ್ನು ಹೇಳಿದ್ದಾರೆ. The Commission recommends three criteria for giving reservations to rural candidates. 1) It should be available only for those who have studied in rural schools from Standards 1 to 10. 2) In the case of those ownig agricultural lands, their parents should be the farmers with limits of land holding creamy layer portion. ಈ ಎರಡು ಶಿಫಾರಸ್ಸುಗಳಲ್ಲಿ ಸುಪ್ರೀಂ ಕೋರ್ಟಿನಲ್ಲಿ ಹಾಕಿದ್ದಂಥ ನಿಬಂಧನೆಯನ್ನೇ ಇವರೂ ಕೂಡ ಹಾಕಿದ್ದಾರೆ. ಈ ಬಗ್ಗೆ ನಾವು ವಿವಿಧ ಕಾನೂನಿನ ತಜ್ಞರ ಜೊತೆಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ಆಯೋಗ ಹೇಳಿರುವಂತೆ ಶೇಕಡ 50ರ ವರ್ಟಿಕಲ್ ರಿಸರ್ವೇಷನ್

ಇಂದಿರಾ ಸಹನಿ v/s ಭಾರತ ಸರ್ಕಾರದ ಪ್ರಕರಣದಲ್ಲಿ ಬಾಧಕವಾಗುತ್ತದೆ. ಹೀಗೆ ಮಾಡುವುದರಿಂದ ಪುನ: ಮೊದಲಿನ ರಿಸಲ್ಟೇ ಬರುತ್ತದೆ. ಹಾಗಾದರೆ ಏನು ಮಾಡಬೇಕು? ಈಗ ನಮಗೆ ಒಂದು ಆಲೋಚನೆ ಬಂತು. ಇಲ್ಲಿ ತಾವು ಕೊಡತಕ್ಕಂಥ ಸಲಹೆಯನ್ನು ಆಳವಡಿಸಿಕೊಳ್ಳಲು ನಾನು ಸಿದ್ಧನಾಗಿದ್ದೇನೆ. ಈ ಬಾಧಕವನ್ನು ತಪ್ಪಿಸಿಕೊಳ್ಳಲು ನಾವು ಮಾಡಿದುದೆಂದರೆ, ಒಟ್ಟಾರೆ 100 ಹುದ್ದೆಗಳಿದ್ದರೆ ಅವುಗಳಲ್ಲಿ 10 ಹುದ್ದೆಗಳನ್ನು ಗ್ರಾಮೀಣ ಪ್ರದೇಶದ ಜನರಿಗೆಂದು ಮೀಸಲಾಗಿಡಬೇಕು. ಇದು ಹಾರಿಜಾಂಟಲ್ ರಿಸರ್ವೇಷನ್. ಇದು ಶೇಕಡ 50ರಷ್ಟಿರುವ ಮೀಸಲಾತಿಯೊಳಗೇ ಬರಲಿ ಅಥವಾ 50ಕ್ಕಿಂತ ಮೇಲೆ ಬರತಕ್ಕಂಥ ಜನರಲ್ ಕೆಟಗರಿಯಲ್ಲೇ ಬಂದರೂ ಕೂಡ ಶೇಕಡ 10ರಷ್ಟು ಹುದ್ದೆಗಳನ್ನು ಗ್ರಾಮೀಣ ಪ್ರದೇಶದ ಮಕ್ಕಳಿಗಾಗಿ ಮೀಸಲಿಡತಕ್ಕಂಥಾದ್ದು. In a way, I would call it a reservation within the reservation even among the General Category, it is a reservation. ಹೀಗೆ ನಿಗದಿ ಮಾಡುವಾಗ, ಹಿಂದೆ ನಾವು ಮಾಡಿದಂಥ ತಪ್ಪುಗಳು ಅಂದರೆ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಳ್ಳುವುದು, ಅದನ್ನು ವಿಸ್ತರಣೆ ಮಾಡುವುದು ಇಂಥವುಗಳನ್ನು ಸರಿಪಡಿಸಿದಂತಾಗುತ್ತದೆ. ನಾವು ಗ್ರಾಮ ಪಂಚಾಯಿತಿಗಳ ಚುನಾವಣೆಗಳನ್ನು ಮಾಡಿದ್ದೇವೆ. ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯನ್ನು ನಿಗದಿ ಮಾಡಿದ್ದೇವೆ. Geographical contiguity of a village has been defined well. ಪುರಸಭೆಗಳನ್ನು ಬಿಟ್ಟು, ನಗರಸಭೆಗಳನ್ನು ಬಿಟ್ಟು, ವಿಸ್ತೃತವಾದ ಮಂಡಲಗಳನ್ನು ಬಿಟ್ಟು ಉಳಿದವುಗಳೆಲ್ಲಾ ಗ್ರಾಮ ಪಂಚಾಯಿತಿಗಳು.

+ ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಅಧ್ಯಕ್ಷರೇ, ಸಂವಿಧಾನವನ್ನು ಬರೆದಂಥವರು ಹಳ್ಳಿಯಲ್ಲಿ ಹುಟ್ಟಿದವರಲ್ಲ ಅಥವಾ ಶೆಡ್‌ಗಳಲ್ಲಿ ಹುಟ್ಟಿದವರ ಮಕ್ಕಳುಗಳಲ್ಲ. ತುಂಬಾ ಕೋಟ್ಯಾಧೀಶ್ವರರ ಮಕ್ಕಳು, ತುಂಬ ಇನ್‌ಫ್ಲ್ಯೂಯೆನ್ಸ್ ಇರುವವರು ದೆಹಲಿಯಲ್ಲಿ ಕುಳಿತುಕೊಂಡು, ನೆಶ್ಯ ಹಾಕಿಕೊಂಡು, ಪಾನೀಯ ಕುಡಿದುಕೊಂಡು ಬರದಿರತಕ್ಕಂಥ ಈ ಸಂವಿಧಾನವನ್ನು ದೇವಲೋಕದಿಂದ ಇಳಿದಿದೆ ಎಂದು ನಮ್ಮ ಮೇಲೆ ಹೇರಲು ಹೋಗಬೇಡಿ. ಶೇಕಡ 80ರಷ್ಟು ಜನ ತಲೆತಲಾಂತರದಿಂದ ಈ ದೇಶದ ಅಭಿವೃದ್ಧಿಗೆ ಶ್ರಮಿಸಿದ್ದಾರೆ, ತಮ್ಮ ರಕ್ತವನ್ನು ಸುರಿದು ಗಡಿಗಳನ್ನು ಕಾದು ಈ ದೇಶವನ್ನು ರಕ್ಷಣೆ ಮಾಡಿದ್ದಾರೆ. ಎಲ್ಲಾ ವಿಧದಲ್ಲೂ ಕೂಡ ಈ ನಿರ್ಭಾಗ್ಯ ಜೀವಿಗಳಿಗೆ ಈ ಕಾಲದಲ್ಲೂ ರಕ್ಷಣೆ ಇಲ್ಲ ಅಂದಮೇಲೆ ಯಾವಾಗ ರಕ್ಷಣೆ ಸಿಗುತ್ತದೆ? ಏಕೆ ಆ ಸಂವಿಧಾನವನ್ನು ತೋರಿಸುತ್ತೀರಿ? ಸಂವಿಧಾನವನ್ನು ಬರೆದವರು ಯಾರು? ಸಂವಿಧಾನವನ್ನು ಬರೆಯುವಾಗ ಅಲ್ಲಿ ಹಳ್ಳಿಯವರ ಮಕ್ಕಳು ಯಾರಾದರೂ ಇದ್ದರೇ? ಶೆಡ್‌ಗಳಲ್ಲಿ ಹುಟ್ಟಿದವರ ಮಕ್ಕಳು ಇದ್ದರೇ? ದೊಡ್ಡ ದೊಡ್ಡ ಇನ್‌ಫ್ಲ್ಯೂಯನ್ಸ್ ಇರುವವರು ಕುಳಿತುಕೊಂಡು ಮಾಡಿರತಕ್ಕಂಥಾದ್ದು ಅದು. ಇಂಗ್ಲಿಷಿನಲ್ಲಿ ಓದುವುದು, ಬರೆಯುವುದೇ ಒಬ್ಬನ ವ್ಯಕ್ತಿತ್ವವನ್ನು ಪ್ರೂವ್ ಮಾಡುತ್ತದೆಯೇ? ನೀವು ಮಾತನಾಡುವುದು ನೋಡಿದರೆ ನನಗೆ ಅಷ್ಟು ಸಂಕಟವಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಹನುಮೇಗೌಡರೇ, ನಿಮ್ಮ ಭಾಷೆಯಲ್ಲೇ ನಾನು ಮಾತನಾಡಿದ್ದೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಒಂದ್ನಿಮಿಷ ನನಗೆ ಮಾತನಾಡುವುದಕ್ಕೆ ಅವಕಾಶ ಕೋಡಿ. ಗ್ರಾಮಾಂತರ ಜನರಿಗೆ ಯಾವ ವಿಧವಾಗಿ ತೊಂದರೆಯಾಗುತ್ತಿದೆ ಎನ್ನುವುದನ್ನು ಹೇಳುತ್ತೇನೆ. ರೇಟ್ ಡೌನ್ ಆದರೆ ಹೇಳುವವರಿಲ್ಲ, ಕೇಳುವವರಿಲ್ಲ. ಅವರು ಬೆಳೆಯದೇ ಹೋದರೆ ನೀವು ಏನು ತಿನ್ನುತ್ತೀರಿ? ಅವರು ಟ್ಯಾಕ್ಸ್ ಕೊಡದೇ ಹೋದರೆ ಸರ್ಕಾರ ಹೇಗೆ ನಡೆಯುತ್ತದೆ? ಆ ಬಡಪಾಯಿ ಮಕ್ಕಳಿಗೆ ಆಗುತ್ತಿರುವ ಅನ್ಯಾಯ ಈ ಕಾಲದಲ್ಲಾದರೂ ಕೊನೆಯಾಗುವುದು ಬೇಡವೇ? ಜನಗಳ ಅಭಿಪ್ರಾಯವನ್ನು ಇಲ್ಲಿ ನಾನು ಹೇಳುತ್ತೇನೆ. ಹಳ್ಳಿಯಲ್ಲಿರುವ ಪಾಪದ ಜನರು ದನ ಕಾಯಬೇಕು, ನಿಮಗೆಲ್ಲಾ ಆಹಾರ ಬೆಳೆಯಬೇಕು, ಸರ್ಕಾರ ನಡೆಸುವುದಕ್ಕೆ ಟ್ಯಾಕ್ಸ್ ಕೊಡಬೇಕು, ಆದರೆ ಅಲ್ಲಿ ಎಲ್ಲೋ ಹಳ್ಳಿಯಲ್ಲಿ ಕುಳಿತಿರುತ್ತಾರೆ. ಅವರು ಆ ದಿವಸ ಓದುವುದಕ್ಕೆ ಹೋದರೂ, ಹೋಗದಿದ್ದರೂ ಆಯಿತು. ನಾನು ಸುಮಾರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗೆ ಹೋಗಿ ಚೆಕ್ ಮಾಡಿದ್ದೇನೆ. ಮಾಧ್ಯಮಿಕ ಶಾಲೆಗಳಲ್ಲಿ ಪಾಠ ಹೇಳತಕ್ಕಂಥ ಮೇಸ್ಟ್ರುಗಳಿಗೆ ಮಗ್ಗಿ ಬರುವುದಿಲ್ಲ. ಅವರಿಗೆ ಎ.ಬಿ.ಸಿ.ಡಿ. ಸರಿಯಾಗಿ ಬರುವುದಿಲ್ಲ. ಸ್ಪೆಲಿಂಗ್ ಹೇಳಿಕೊಡುವುದಕ್ಕೆ ಬರುವುದಿಲ್ಲ. ಅಂಥವರ ಮಾರ್ಗದರ್ಶನದಲ್ಲಿ ಹಳ್ಳಿಯ ಮಕ್ಕಳು ವಿದ್ಯೆ ಕಲೆಯಬೇಕಾಗುತ್ತದೆ. ಆದರೆ ಪಟ್ಟಣದಲ್ಲಿ ಮಗು ಹುಟ್ಟುವುದಕ್ಕೆ ಮುಂಚೆಯೇ ಕಾನ್ವೆಂಟ್ ಶಾಲೆಗಳಲ್ಲಿ ಸೀಟ್ ರೆಡಿಮಾಡಿ ಇಟ್ಟಿರುತ್ತಾರೆ. 25,000 ರೂಪಾಯಿಗಳಿಂದ 1 ಲಕ್ಷ ರೂಪಾಯಿಗಳವರೆಗೆ ಡೊನೇಷನ್ ಕೊಟ್ಟು ಸೂಪರ್ ಸ್ಪೆಶಾಲಿಟಿ ಹಾಸ್ಪಿಟಲ್ ಎಂದು ಏನು ಇದೆ ಆ ರೀತಿಯ ಹೈಕ್ಲಾಸ್ ಸ್ಕೂಲ್‌ಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿಸಿದಾಗ ಆ ಮಕ್ಕಳು ಪಟಪಟನೆ ಇಂಗ್ಲೀಷ್‌ನ್ನು ಓದುತ್ತಾರೆ. ಅದೇ ಪರ್ಸನಾಲಿಟಿಯೇ, ಅದೇ ವಿದ್ಯೆಯೇ? ಹಳ್ಳಿಯಲ್ಲಿ ಓದಿದವರಿಗೂ ಪಟ್ಟಣದಲ್ಲಿ ಓದಿದವರಿಗೂ ನೀವು ತಾಳೆ ಹಾಕುತ್ತಿದ್ದೀರಾ? ದೇಶದ ಜನತೆಗೆ ಅನ್ನಕ್ಕೋಸ್ಕರ ದುಡಿಯುವ ಮಕ್ಕಳು ಒಂದು ಕಡೆ, ಪಟ್ಟಣದಲ್ಲಿ ಕೋಟ್ಯಾಂತರ ರೂಪಾಯಿ ಇಟ್ಟುಕೊಂಡು ಬಂದು-ಒಂದುವರೆ ಲಕ್ಷ ರೂಪಾಯಿ ಹಣ ಕೊಟ್ಟು ಓದಿಸುವವರು ಇನ್ನೊಂದು ಕಡೆ. ಇದಕ್ಕೆ ಒಂದು ನ್ಯಾಯ, ಧರ್ಮ ಬೇಡವೇ? ಹಳ್ಳಿಯ ಜನರಾದ ನಾವು ಈ ದೇಶದ ಕುರಿಗಳು ಎಂದು ತಿಳಿದುಕೊಂಡಿದ್ದಾರೆಯೇ? ಈ ಕಾಲದಲ್ಲಾದರೂ ನ್ಯಾಯ ಸಿಗದಿದ್ದರೆ ಇನ್ನು ಯಾವಾಗ ಹಳ್ಳಿಯವರಿಗೆ, ಹಳ್ಳಿಯ ಮಕ್ಕಳಿಗೆ ನ್ಯಾಯ ಸಿಕ್ಕುತ್ತದೆ? ದಯವಿಟ್ಟು ಹೇಳಿ ನೋಡೋಣ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಈ ಬಿಲ್‌ನಲ್ಲಿ ಏನು ವಿವರಣೆ ಹೇಳಿದ್ದಾರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. 10 ಪರ್ಸೆಂಟ್ ಮೀಸಲಾತಿ ಇಡುತ್ತೇವೆಂದು ಹೇಳಿದಿರಿ. ಆದರೆ ಇಲ್ಲಿ 50 ಪರ್ಸೆಂಟ್‌ಗಿಂತ ಹೆಚ್ಚಿಗೇನೂ ಹೋಗಿಲ್ಲ.

ನಾವು ಕೇಳುವುದು ಏನೆಂದರೆ ಹಳ್ಳಿಯ ಜನಸಂಖ್ಯೆ ಎಷ್ಟು ಇದೆ ಅಷ್ಟು ಪರ್ಸೆಂಟೇಜ್ ಪರ್ಸೆಂಟೇಜ್ ಮೀಸಲಾತಿಯನ್ನು ಕೊಡಿ.

ಶ್ರೀ ಕೆ.ಹೆಚ್. ಹನುಮೇಗೌಡ :— 50 ಪರ್ಸೆಂಟ್‌ಗಿಂತ ಮೇಲೆ ಮೀಸಲಾತಿ ಹೋದರೆ ನಿಮ್ಮ ಗಂಟು ಬಿದ್ದುಹೋಗುತ್ತದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ :— 50 ಪರ್ಸೆಂಟ್‌ಗಿಂತ ಹೆಚ್ಚು ತಂದರೆ ಈ ಬಿಲ್ ಬಿದ್ದು ಹೋಗುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಆದು ಹೇಗೆ ಬಿದ್ದುಹೋಗುತ್ತದೆ? ಹಳ್ಳಿಯವರಿಗೆ ಏನು ಕೊಡಬೇಕೋ ಅದನ್ನು ನ್ಯಾಯವಾಗಿ ಕೊಡಿ.

*(ಗೊಂದಲ)*

ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಅಧ್ಯಕ್ಷರೆ, ಸಂವಿಧಾನವನ್ನು ಬರೆದಿರುವವರು ಮನುಷ್ಯರು. ಅವರೇನೂ ದೇವಸಂಭೂತರಲ್ಲ, ಅಥವಾ ದೇವಲೋಕದಿಂದ ಇಳಿದು ಬಂದವರಲ್ಲ. ಹಳ್ಳಿಯವರ ಮಕ್ಕಳಿಗೆ ಏನು ನ್ಯಾಯ ದೊರಕಬೇಕೋ ಅದನ್ನು ದೊರಕಿಸಿಕೊಡಿ. ಹಳ್ಳಿಯಲ್ಲಿ ಹೊಟ್ಟಿಗಿಲ್ಲದವನು ಪ್ರೈಮರಿ ಸ್ಕೂಲ್‌ನಲ್ಲಿ ಓದಿ ಬಟ್ಟೆ ಇದ್ದರೆ ತಿಂಡಿ ಇಲ್ಲ, ತಿಂಡಿ ಇದ್ದರೆ ಬಟ್ಟೆ ಇಲ್ಲ, ಇಂಥವರನ್ನು ಕಾನ್‌ವೆಂಟ್ ಸ್ಕೂಲಿನಲ್ಲಿ ಓದಿದ ಮಕ್ಕಳ ಜೊತೆ ಹೋಲಿಸುವುದು ನ್ಯಾಯವೇ? ಆ ಕಾನ್ವೆಂಟ್ ಸ್ಕೂಲ್‌ನಲ್ಲಿ ಓದಿದ ಮಕ್ಕಳಿಗೆ ಕೊಡುವ ಎಜ್ಯುಕೇಷನ್ ಅನ್ನು ನಮ್ಮ ಮಕ್ಕಳಿಗೂ ಕೊಡಲಿ, ಅವತ್ತು ನೀವು ಹೋಲಿಕೆ ಮಾಡಿ ನಾವು ಎಂಥ ಪರಿಸ್ಥಿತಿಯಲ್ಲಿ ಹುಟ್ಟಿಬಂದಿದ್ದೇವೆ ಎನ್ನುವುದು ಆ ದೇವರಿಗೇ ಗೊತ್ತು. ನಮ್ಮ ಅಪ್ಪನ ಹೆಸರು ಹನುಮೇಗೌಡ ಎಂದು. ಮಗುವಿಗೆ ಹೆಸರೇನು ಇಡೋಣ ಎಂದು ಕೇಳಿದರಂತೆ. ಅವರ ಅಪ್ಪನ ಹೆಸರನ್ನು ಇಡಿ ಎಂದು ಹೇಳಿದರಂತೆ. ಅದಕ್ಕೆ ನನ್ನ ಹೆಸರು ಕೂಡ ಹನುಮೇಗೌಡ. ಆ ಮೇಲೆ ಹುಟ್ಟಿದ ತಾರೀಖು ಗೊತ್ತಿಲ್ಲ. ಒಂದು ಕಡೆ ಹುಟ್ಟಿ ನಾನು ನಾಲ್ಕೈದು ವರ್ಷ ಬೆಳೆದದ್ದು ಒಂದು ಶೆಡ್‌ನಲ್ಲಿ. ಆ ಪಕ್ಕದಲ್ಲಿ ಕಾಡು ಇತ್ತಂತೆ, ಹಂದಿ ಬಂದು ನನ್ನನ್ನು ಹೊತ್ತುಕೊಂಡು ಹೋಗಿಬಿಟ್ಟಿತ್ತಂತೆ. ಇಂಥ ಅಡ್ವರ್ಸ್ ಪೊಸಿಷನ್‌ನಲ್ಲಿ ಬೆಳೆದಂಥ ಮಕ್ಕಳನ್ನು ತಂದು ಇಲ್ಲಿ 50 ಸಾವಿರ ರೂಪಾಯಿ ಡೊನೇಷನ್ ಕೊಟ್ಟು ಕಾನ್ವೆಂಟ್‌ನಲ್ಲಿ ಓದಿಂದಂಥ ಮಕ್ಕಳ ಜೊತೆ ತೂಕ ಹಾಕುವುದಕ್ಕೆ ಹೊರಟಿದ್ದೀರಾ? ನಿಮ್ಮ ಕೆಲಸವನ್ನು ದೇವರು ಮೆಚ್ಚುತ್ತಾನೆಯೇ? ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ಕೆ.ಆರ್. ಪೇಟೆಯ ಎಸ್‌ಎಂ. ಲಿಂಗಪ್ಪ ಎನ್ನುವ ಒಬ್ಬ ಬ್ಯಾಚುಲರ್ ಕಾಂಗ್ರೆಸ್‌ನಲ್ಲಿ ಇದ್ದರು. ನಾನು 'ಒ' ಕಾಂಗ್ರೆಸ್‌ನಲ್ಲಿದ್ದೆ. ಇದು ಸುಮಾರು 1974ರಲ್ಲಿ ನಡೆದದ್ದು. ಎಮರ್ಜೆನ್ಸಿ ಪೀರಿಯಡ್‌ನಲ್ಲಿ ಶ್ರೀ ಶಿವಬಾಲಯೋಗಿ

ಸ್ವಾಮಿಗಳನ್ನು ನೋಡಿಕೊಂಡು ಬರೋಣ ಎಂದು ನನ್ನನ್ನು ಕರದುಕೊಂಡು ಹೋದರು. ಆ ಶಿವಬಾಲಯೋಗಿಗಳಿಗೆ ಕನ್ನಡವೂ ಬರುತ್ತಿರಲಿಲ್ಲ. ಇಂಗ್ಲಿಷ್ ಕೂಡ ಬರುತ್ತಿರಲಿಲ್ಲ. ನನಗೆ ತೆಲಗು ಬರುತ್ತಿರಲಿಲ್ಲ. ಇಂಗ್ಲಿಷ್ ಮಾತನಾಡುವಾಗ ಒಬ್ಬರು ಮಿಡಿಯೇಟರ್‌ನ್ನು ಇಟ್ಟುಕೊಂಡು ಮಾತನಾಡುತ್ತಿದ್ದವು. ಎಲ್ಲರೂ ಅವರ ಬಳಿಯಿಂದ ಹೋದಮೇಲೆ ನಾನು ಮತ್ತು ಶ್ರೀ ಎನ್.ಎಂ. ಲಿಂಗಪ್ಪನವರು ಹೋದೆವು. ಅದು ಏನು ಕೇಳುತ್ತೀಯೋ ಕೇಳಪ್ಪ ಎಂದರು. ಎಮೆರ್ಜನ್ಸಿ ಯಾವಾಗ ಹೋಗುತ್ತದೆ ಸ್ವಾಮಿ ಎಂದು ನಾನು ಕೇಳಿದೆ. ಮುಂದಿನ ವರ್ಷ ಇಂಥ ತಾರೀಕಿಗೆ ಎಮರ್ಜೆನ್ಸಿ ಲಿಫ್ಟ್ ಆಗುತ್ತದೆಂದು ಒಂದು ಡೇಟನ್ನು ಕೊಟ್ಟರು. ಅದನ್ನು ಗುರುತು ಹಾಕಿಕೊಂಡೆ. ಆಮೇಲೆ ಈ ದೇಶದ ಭವಿಷ್ಯ ಏನು ಎಂದು ಕೇಳಿದೆ. ಅದೆಲ್ಲ ಬೇಡಪ್ಪಾ, ಅದೆಲ್ಲ ಹೇಳುವುದಕ್ಕೆ ನನಗೆ ಬಹಳ ನೋವಾಗುತ್ತದೆ. ನಾನು ಹೇಳುವುದಿಲ್ಲ ಎಂದು ಶ್ರೀ ಶಿವಬಾಲಯೋಗಿ ಸ್ವಾಮಿಗಳು ಹೇಳಿದರು. ನಾವು ರಾಜಕಾರಣಿಗಳು, ನಾವು ತಿಳಿದುಕೊಳ್ಳಬೇಕು, ದಯವಿಟ್ಟು ಹೇಳಿ ಸ್ವಾಮಿ ಎಂದು ಕೇಳಿದೆವು. ಅವರು ಹೇಳಿದ್ದು ಏನೆಂದರೆ- 'ಈ ದೇಶದಲ್ಲಿ ಪ್ರಜಾಪ್ರಭುತ್ವ ಸರ್ಕಾರ ನಡೆಯುತ್ತಿದೆ. ಈ ದೇಶದಲ್ಲಿ ಇರತಕ್ಕಂಥ ಬಡವರು, ಅನಾಥರು ರೈತನ ಮಕ್ಕಳು ಯಾರು ಇದ್ದಾರೆ ಅವರಿಗೆ ಸರಿಯಾದ ವಿದ್ಯಾಭ್ಯಾಸ ಸಿಗುತ್ತಿಲ್ಲ. ಹೊರದೇಶದಿಂದ ತಂದಿರತಕ್ಕಂಥ ಸಾಲದ ಹಣದಲ್ಲಿ ಈ ಸರ್ಕಾರ ಇನ್ನೂ 10-15 ವರ್ಷ ನಡೆಯುತ್ತದೆ. ಅಲ್ಲಿಯವರೆಗೆ ಈ ದೇಶದಲ್ಲಿ ಏನೂ ಕ್ರಾಂತಿ ಆಗುವುದಿಲ್ಲ. ಬಡವರು, ಅಸಹಾಯಕರು, ಸ್ಲಂನಲ್ಲಿ ಹುಟ್ಟಿದ ಮಕ್ಕಳು ಇದ್ದಾರಲ್ಲಾ ಅವರಿಗೆ ಸರಿಯಾದ ವಿದ್ಯಾಭ್ಯಾಸ ಸಿಗುವುದಿಲ್ಲ ಅವರಿಗೆ ಜೀವಮಾನದಲ್ಲಿ ಸರ್ಕಾರದಿಂದ ಸರಿಯಾದ ಸ್ಥಾನಮಾನ ಸಿಗುವುದಿಲ್ಲ ಅಂದಾಗ ಅತೃಪ್ತಿ ಬರುತ್ತದೆ. ಇನ್ನು 10-12 ವರ್ಷದಲ್ಲಿ ಈ ರೈತರ ಮಕ್ಕಳು ಹೋಗಿ ವ್ಯವಸಾಯ ಮಾಡುವುದಕ್ಕೆ ಸರಿಯಾದ ಜಮೀನು ಇಲ್ಲ, ವ್ಯವಸ್ಥೆ ಇಲ್ಲ, ಅನುಕೂಲ ಇಲ್ಲ, ಹಣ ಇಲ್ಲ, ಸಾಲಕ್ಕೆ ಅರ್ಜಿ ಹಾಕಿದರೆ ಅರ್ಧ-ಮುಕ್ಕಾಲು ಭಾಗ ಲಂಚಕ್ಕೆ ಹೋಗುತ್ತದೆ. ಉಳಿದ ಅತ್ಯಲ್ಪ ಹಣದಲ್ಲಿ ವ್ಯವಸಾಯ ಮಾಡಿ ಸರಿಯಾದ ಜೀವನ ಮಾಡುವುದಕ್ಕೆ ಅವರಿಗೆ ಆಗುವುದಿಲ್ಲ. ಸರ್ಕಾರಿ ಕೆಲಸ ಸಿಗುವುದಿಲ್ಲ. ಅದಕ್ಕೆ ಈ ಸಂವಿಧಾನ, ಮೆರಿಟ್ ಇದನ್ನು ನೆನೆಸಿಕೊಂಡು ಅಷ್ಟೊಂದು ಮನಸ್ಸಿಗೆ ನೋವಾದದ್ದು. ಹೀಗಾಗಿ ಆ ರೈತರ ಮಕ್ಕಳು, ಸಮಾಜದಲ್ಲಿ ಹಿಂದುಳಿದಿರತಕ್ಕಂಥವರ ಮಕ್ಕಳು ಸರ್ಕಾರದ ಕೆಲಸ ಸಿಗದೆ ವ್ಯವಸಾಯ ಮಾಡುವುದಕ್ಕೆ ಕೂಡ ಹೋಗುವುದಕ್ಕಾಗದೆ ಅತೃಪ್ತಿ ಜಾಸ್ತಿಯಾಗಿ ಮೊದಲನೇ ಕಿಡಿ ಪಂಜಾಬ್‌ನಲ್ಲಿ ಹೊತ್ತಿ ಉರಿಯುತ್ತದೆ. ಆ ಪಂಜಾಬಿನ ರೈತರ ಮಕ್ಕಳು, ಹಾರ್ಮಿಕರ ಮಕ್ಕಳು ಈ ಸಿಸ್ಟಮ್‌ಗೆ ವಿರುದ್ಧವಾಗಿ ದಂಗೆ ಏಳುತ್ತಾರೆ. ಕೊನೆಗೆ ಅವರು ಯಾವ ಸ್ಥಿತಿಗೆ ಬರುತಾರೆಂದರೆ ನಮ್ಮ ಸ್ವತಂತ್ರ ಹೋದರೂ ಚಿಂತೆಯಿಲ್ಲ, ಈ ವ್ಯವಸ್ಥೆ ಕಂಟಿನ್ಯೂ ಆಗಬಾರದೆಂದು ಹೇಳಿ ಹೊರದೇಶಗಳ ಸಹಾಯವನ್ನು ತೆಗೆದುಕೊಂಡು ಈ ದೇಶದವರನ್ನು ಒಂದು ಕಡೆಯಿಂದ ಸುಡುತ್ತಾ ಹೋಗುತ್ತಾರೆ. ಪಂಜಾಬ್‌ನಲ್ಲಿ ರಕ್ತದ ಕೋಡಿ ಹರಿಯುತ್ತದೆ

ಎಂದು ಹೇಳಿದರು. ಮುಂದಿನದು ವಾಯುವ್ಯ ಭಾರತದಲ್ಲಿ ಎರಡನೇ ಕಿಡಿ ಹಾರುತ್ತದೆ. ಅಲ್ಲೂ ಕೂಡ ಈ ರೈತರ ಮತ್ತು ಕಾರ್ಮಿಕರ ಮಕ್ಕಳು ದಂಗೆ ಎದ್ದು ಕೊಲೆ ಮಾಡುವುದಕ್ಕೆ ಹೊರಡುತ್ತಾರೆ, ಸುಲಿಗೆ ಮಾಡುತ್ತಾರೆ, ದರೋಡೆ ಮಾಡುತ್ತಾರೆ, ಇದಕ್ಕೆಲ್ಲಾ ಹೊರ ದೇಶದ ಸಹಾಯವನ್ನು ತೆಗೆದುಕೊಳ್ಳುತ್ತಾರೆ, ಆ ಮಕ್ಕಳ ಸ್ಥಿತಿ ಹೇಗಿರುತ್ತದೆಂದರೆ - ಆ ದೇಶದ ಸಂಪತ್ತನ್ನೆಲ್ಲ ಕೆಲವೇ ವ್ಯಕ್ತಿಗಳು ತಿಂದು ಜೀರ್ಣಿಸಿಕೊಂಡು ಅನುಕೂಲ ಪಡೆಯುವಾಗ, ಆ ಸ್ವಾತಂತ್ರ್ಯ ಇಲ್ಲದಿದ್ದರೂ ಪರವಾಗಿಲ್ಲ, ನಮಗೆ ಹೊಟ್ಟೆ ಬಟ್ಟೆಗಾದರೆ ಸಾಕು ಎಂದು ಹೊರದೇಶದಿಂದ ಸಹಾಯವನ್ನು ಪಡೆಯುತ್ತಾರೆ, ರಕ್ತದ ಕೋಡಿ ಹರಿಯುತ್ತದೆ ಎಂದು ಹೇಳಿದರು. ಇನ್ನು ಮೂರನೇ ಕಿಡಿ ದಕ್ಷಿಣ ಭಾರತದಲ್ಲಿ ಹಾರುತ್ತದೆ. ಇಲ್ಲೂ ಕೂಡ ಅದೇ ರೀತಿಯಾಗುತ್ತದೆ, ಹೀಗೆ ಈ ಮೂರು ಕಡೆಯಿಂದಲೂ ಕಿಡಿ ಹಾರಿದಾಗ ಇನ್ನು 15-20 ವರ್ಷದೊಳಗೆ ಬಹಳ ತೊಂದರೆಯಾಗುತ್ತದೆ. ಈಗ ಮೂರು ಕಡೆಯಿಂದ ದಂಗೆ ಎದ್ದು, 15-20 ವರ್ಷದೊಳಗೆ ಈ ದೇಶಕ್ಕೆ ಪುನ: ಪರದೇಶದರು ಅಧಿಕಾರ ನಡೆಸಲು ಬರುವಂತಹ ಸಂಭವ ಇದೆ. ಇದು ನಡೆಯದಿರಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ ಎಂದು ಅವರು ಹೇಳಿದರು. ನಾನು ಈ ಮಾತನ್ನು ಇಲ್ಲಿ ಏಕೆ ಹೇಳುತ್ತಿದ್ದೇನೆ ಎಂದರೆ, ಹೀಗೆ ನಿಮ್ಮ ಮಾತಿನಿಂದ, ನಿಮ್ಮ ಸಂವಿಧಾನದಿಂದ, ಈ ಸಂವಿಧಾನ ಓದುವಂತಹವರಿಂದ, ಇದನ್ನು ಇಂಟರ್‌ಪ್ರಿಟ್ ಮಾಡುವುದರ ದಿಸೆಯಿಂದ ಆ ಹಳ್ಳಿ ಮಕ್ಕಳಿಗೆ ಮೋಸ ಮಾಡಿ, ವಂಚನೆ ಮಾಡಿ, ಅವರಿಗೆ ಅವಕಾಶ ತಪ್ಪಿಸಿ, ಆ ವಂಚಿತರು ದಂಗೆ ಎದ್ದು, ನಿಮ್ಮನ್ನೂ ಕೊಚ್ಚಿ ಹಾಕಿ ಈ ಸಮಾಜದಲ್ಲಿ ದಂಗೆಗೆ ಅವಕಾಶವಾಗುತ್ತದೆ. ಅಂತಹ ದಂಗೆಗೆ ಅವಕಾಶ ಕೊಡಬೇಡಿ. ನ್ಯಾಯವಾಗಿ ಹಳ್ಳಿಯವರ ಮಕ್ಕಳಿಗೆ ಏನು ಕೊಡಬೇಕೋ ಅದನ್ನು ಕೊಡಿ. ಒಬ್ಬರ ವ್ಯಕ್ತಿತ್ವ ಎಂದರೆ ಏನು? ಹಾಗಾದರೆ ಇಂಗ್ಲೀಷಿನಲ್ಲಿ ಓದುವುದು ಮತ್ತು ಬರೆಯುವುದು ವ್ಯಕ್ತಿತ್ವವೇ? ಬಡವರ ಮನೆಯಲ್ಲಿ ಹುಟ್ಟಿ ಬಂದವನಿಗೆ, ಆ ಕಷ್ಟ-ಸುಖ ಗೊತ್ತಿರುವವನಿಗೆ ಈ ಕಾನ್ವೆಂಟ್‌ನಲ್ಲಿ ಓದುವವರಿಗೆ ಗೊತ್ತೇ? ಕಾನ್ವೆಂಟ್‌ನಲ್ಲಿ ಓದಿ ಬಂದಿರುತ್ತಾರಲ್ಲಾ...

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಹನುಮೇಗೌಡರು ನಮ್ಮ ಪರವಾಗಿ ವಕಾಲತ್ತು ಮಾಡುತ್ತಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುವ ಸಲುವಾಗಿಯಾದರೂ ಅವರು ನಮಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ :— ಆ ಶೇಕಡ 10ರಷ್ಟು ಮೀಸಲಾತಿಯನ್ನು ಇನ್ನೂ ಹೆಚ್ಚಿಸಿ ನ್ಯಾಯವಾಗಿ ಎಲ್ಲಾ ಹಳ್ಳಿಯವರಿಗೂ ಅವಕಾಶ ಮಾಡಿಕೊಡಿ. ಅವರೂ ಕೂಡ ನಾಲ್ಕು ದಿವಸ ಬದುಕುವಂತಾಗಲಿ. ಹಳ್ಳಿಯ ಜನ ತಲೆ ತಲಾಂತರಗಳಿಂದ ಕಸಕ್ಕಿಂತ ಕಡೆಯಾಗಿ ಇದ್ದಂತಹ ಜನರಾಗಿದ್ದಾರೆ. ಅವರ ಮಕ್ಕಳಾದರೂ ಎದ್ದು ನಿಂತುಕೊಂಡು ನಾಲ್ಕು ದಿವಸ ಈ ಸರ್ಕಾರದಲ್ಲಿ ಭಾಗಿಯಾಗಿ ಈ ಕಷ್ಟ ಸುಖವನ್ನು ಅನುಭವಿಸುವಂತಹ

ಒಂದು ವ್ಯವಸ್ಥೆ ಅವರಿಗೆ ಸಿಕ್ಕಬಾರದೇ? ಆ ದೃಷ್ಟಿಯನಿಟ್ಟುಕೊಂಡು ನೀವು ಮಾತನಾಡಿ. ಇನ್ನೊಮ್ಮ ಏನಾದರೂ ತಾವು ಸಂವಿಧಾನದ ಬಗ್ಗೆ ಹೇಳಿದರೆ ನನಗೆ ಹತ್ತರಷ್ಟು ರೇಗು ಹತ್ತುತ್ತದೆ. ಸಂವಿಧಾನ ಬರೆದಿರುವವರು ದೇವಲೋಕದಿಂದ ಬಂದಿರುವವರೂ ಅಲ್ಲ, ಅದು ದೇವರು ಬರೆದಿರುವುದಲ್ಲ, ಅದನ್ನು ಮನುಷ್ಯರು ಅದರಲ್ಲೂ ಶ್ರೀಮಂತರ ಮಕ್ಕಳು ಬರೆದಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಉಪಾಧ್ಯಕ್ಷರೇ, ನಾನು ಮಾನ್ಯ ಹನುಮೇಗೌಡರನ್ನು ಅವರು ನನ್ನ ಪರವಾಗಿ ವಾದ ಮಾಡಿದ್ದಕ್ಕಾಗಿ ಅಭಿನಂದಿಸುತ್ತೇನೆ. ಈ ಮಸೂದೆಯ ಉದ್ದೇಶವೇ ಅದು. ಆದರೆ ಯಾರು ವ್ಯವಸ್ಥೆ ಕೆಡಿಸಿ ಇವತ್ತಿನ ಈ ಸ್ಥಿತಿಗೆ ಕಾರಣರೋ ಅವರ ಜೊತೆಗೆ ಹೋಗಿ ಏಕೆ ಮಾನ್ಯ ಹನುಮೇಗೌಡರು ಸೇರಿಕೊಂಡಿದ್ದಾರೆ? ಸಂವಿಧಾನದ ಫ್ರೇಮರ್ಸ್ ಏನು ಮಾಡಿದರು ಏನು ಬಿಟ್ಟರು ಎಂಬ ಚರ್ಚೆಗೆ ನಾನು ಈಗ ಹೋಗುವುದಿಲ್ಲ. ಶಾಸನ ಸಭೆಯೊಳಗೆ ನಮ್ಮ ಇತಿಮಿತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಅಳಿಲು ಸೇವೆಯನ್ನು ಮಾಡೋಣ ಎಂದು ನಾವು ಪ್ರಯತ್ನ ಮಾಡಿದ್ದೇವೆ. ಮಾನ್ಯ ಸದಸ್ಯರು ನೂರಕ್ಕೆ ನೂರು ಮೀಸಲಾತಿ ಇಡಬೇಕು ಎಂದು ಹೇಳುವುದಾದರೆ ಅದಕ್ಕೆ ನಾನು ತಯಾರಾಗಿದ್ದೇನೆ. ಶೇಕಡಾವಾರು ಅವರ ಜನಸಂಖ್ಯೆ ಎಷ್ಟು ಇದೆಯೋ ಅಷ್ಟನ್ನು ಅಂದರೆ ಶೇಕಡ 80ರಷ್ಟನ್ನು ಕೊಡಲು ನಾನು ತಯಾರಿದ್ದೇನೆ. ನಾನು ಅದಕ್ಕೆ ವಿರೋಧಿಯಲ್ಲ. ನಮ್ಮ ಇತಿಮಿತಿಯಲ್ಲಿ ಇದನ್ನು ನಾವು ತಂದಿದ್ದೇವೆ. ಇರುವ ಸಂವಿಧಾನದ ಪುಸ್ತಕವನ್ನು ನಾವು ಸುಟ್ಟು ಹಾಕಿದರೆ ಅದು ಎಲ್ಲಿರಬೇಕೋ ಅಲ್ಲಿ ಇದ್ದೇ ಇರುತ್ತದೆ. ನಮ್ಮ ಕೋಪದಲ್ಲಿ ನಾವು ಸಂವಿಧಾನವನ್ನು ಸುಟ್ಟರೆ ಕೇವಲ ಒಂದು ಪುಸ್ತಕವನ್ನು ಸುಟ್ಟಂತಾಗುತ್ತದೆಯಷ್ಟೆ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ವ್ಯಾಪ್ತಿಯೊಳಗೆ ಎಷ್ಟು ಸಾಧ್ಯವೋ ಅಷ್ಟನ್ನು ನಾವು ಇಲ್ಲಿ ತಂದಿದ್ದೇವೆ. ಇದನ್ನು ಹೆಚ್ಚು ಮಾಡಬಾರದು ಎಂಬುದು ನನ್ನ ಉದ್ದೇಶವಲ್ಲ. ಆದರೆ ಶೇಕಡ 5ರಷ್ಟು ಎಂದು ಅವರೇನು ಹೇಳಿದ್ದಾರೋ, ಆ ವರ್ಟಿಕಲ್ ರಿಸರ್ವೇಷನ್‌ನಲ್ಲಿ ಶೇಕಡ 10ರಷ್ಟು ಮೀಸಲಾತಿ ಕೊಡಬೇಕು ಎನ್ನುವಂತಹ ಮಸೂದೆಯನ್ನು ತಮ್ಮ ಮುಂದಿಟ್ಟಿದ್ದೇನೆ. ಅದರ ಬಗ್ಗೆ ಚರ್ಚೆಯಾಗಲಿ.

ಶ್ರೀ ಸಿ. ಬೈರೇಗೌಡ :— ಸರ್ಕಾರದವರು ಶೇಕಡ 10ರಷ್ಟು ಮೀಸಲಾತಿ ಕೊಡುವ ಮಾತನ್ನು ಆಡುತ್ತಿದ್ದಾರೆ, ಅದರ ಬದಲಾಗಿ ಶೇಕಡ 10ರಷ್ಟು ಅಂಕಗಳನ್ನು ಕೊಟ್ಟರೆ ಏನಾಗುತ್ತದೆ?

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಹನುಮೇಗೌಡರಿಗೆ ಇರುವಷ್ಟೇ ಕಳಕಳಿ ನಮಗೆಲ್ಲರಿಗೂ ಇದೆ. ನಾವೆಲ್ಲರೂ ಹಳ್ಳಿಯ ಗುಡಿಸಲಿನಲ್ಲೇ ಹುಟ್ಟಿ ಬಹಳ ಕಷ್ಟಪಟ್ಟು ಇಂಗ್ಲೀಷ್ ಗೊತ್ತಿಲ್ಲದೇ ಸರ್ಕಾರಿ ಶಾಲೆಗಳಲ್ಲಿ

ಓದಿ ಇಲ್ಲಿಯವರೆಗೂ ಬಂದಿರತಕ್ಕಂಥವರ ಮಕ್ಕಳೇ ಬಹುತೇಕ ಮಕ್ಕಳಿರತಕ್ಕಂಥದ್ದು. ಗ್ರಾಮೀಣ ಅಭ್ಯರ್ಥಿಗಳಿಗೆ ಮೀಸಲಾತಿ ಕೊಡಬೇಕು ಎನ್ನುವುದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಸರ್ಕಾರ ತಂದಿರತಕ್ಕ ಮಸೂದೆಯನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ನನ್ನದೊಂದು ಲೀಗಲ್ ಮತ್ತು ಟೆಕ್ನಿಕಲ್ ಪಾಯಿಂಟ್ ಇದೆ. ಈಗ ನೇಮಕಾತಿಗಳಲ್ಲಿ ಎಸ್.ಸಿ.ಗೆ ಶೇಕಡ 15ರಷ್ಟು, ಎಸ್.ಟಿ.ಗೆ ಶೇಕಡ 3ರಷ್ಟು, ಹಿಂದುಳಿದ ವರ್ಗಗಳಿಗೆ ಶೇಕಡ 32ರಷ್ಟು ಮತ್ತು ಸಾಮಾನ್ಯ ವರ್ಗದವರಿಗೆ ಶೇಕಡ 50ರಷ್ಟು ಮೀಸಲಾತಿಯನ್ನು ನೀಡಲಾಗುತ್ತಿದೆ. ``Indira Sahani" ಕೇಸ್‌ನಲ್ಲಿ ಸುಪ್ರೀಂಕೋರ್ಟಿನವರು ಯಾವುದೇ ಮೀಸಲಾತಿ ಶೇಕಡ 50ರಷ್ಟನ್ನು ಮೀರಬಾರದು ಎಂದು ತೀರ್ಪನ್ನು ಕೊಟ್ಟರು. ಈಗ ಮಹಿಳೆಯರಿಗೆ ಶೇಕಡ 30ರಷ್ಟು, ಎಕ್ಸ್-ಸರ್ವೀಸ್‌ಮೆನ್‌ಗೆ ಶೇಕಡ 10ರಷ್ಟು, ಅಂಗವಿಕಲರಿಗೆ ಶೇಕಡ 5ರಷ್ಟು ಮತ್ತು ಪ್ರಾಜೆಕ್ಟ್ ಡಿಸ್‌ಪ್ಲೇಸ್ಡ್ ಪರ್ಸನ್ಸ್‌ಗೆ ಶೇಕಡ 5 ರಷ್ಟು ಮೀಸಲಾತಿಯನ್ನು ನೀಡಲಾಗಿದೆ. ಈಗ ಏನೇ ಮೀಸಲಾತಿಗಳನ್ನು ಕೊಟ್ಟರೂ ಅದು ಶೇಕಡ 50ರಷ್ಟನ್ನು ಮೀರಿಲ್ಲ. ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಲ್ಲಿ ಸಹ ಶೇಕಡ 10ರಷ್ಟು ಗ್ರಾಮೀಣರಿಗೆ ಕೃಪಾಂಕಗಳನ್ನು ನೀಡುವ ನಮ್ಮ ಸರ್ಕಾರದ ನಿರ್ಧಾರವನ್ನು ಸುಪ್ರೀಂ ಕೋರ್ಟ್ ವಜಾ ಮಾಡಿದೆ. ಇದರಿಂದಾಗಿ ಸುಮಾರು 5-6 ತಿಂಗಳುಗಳಿಂದ ಎಲ್ಲಾ ನೇಮಕಾತಿಗಳೂ ಸಹ ಸ್ಥಗಿತವಾಗಿವೆ. ನನ್ನ ಮೂಲಭೂತವಾದಂತಹ ಪ್ರಶ್ನೆ ಏನೆಂದರೆ, ಈಗ ನಾವು ಪ್ರಾಜೆಕ್ಟ್ ಡಿಸ್‌ಪ್ಲೇಸ್ಡ್ ಪರ್ಸನ್‌ಗಳಿಗೆಂದು ಶೇಕಡ 5ರಷ್ಟು ಮೀಸಲಾತಿಯನ್ನು ಕೊಟ್ಟಿದ್ದೇವೆ, ನಾವು ಅದಕ್ಕೆ ಯಾವುದೇ ಬಿಲ್ ಅನ್ನು ತಂದಿರಲಿಲ್ಲ ಎಂಬುದನ್ನು ಮಾನ್ಯ ಚಂದ್ರೇಗೌಡರು ಗಮನಿಸಬೇಕು. This 10% reservation is within the reservation. It is not outside the reservation. ಎಂದು ಮಾನ್ಯ ಚಂದ್ರೇಗೌಡರು ಹೇಳಿದರು. ರಾಮಕೃಷ್ಣ ಆಯೋಗದವರು 5% over and above 50% ಮೀಸಲಾತಿ ಕೊಡಿ ಎಂದು ರೆಕ್ಕೆಂಡ್ ಮಾಡಿದ್ದಾರೆ. ಹಳ್ಳಿಗಾಡಿನಲ್ಲಿ ಹತ್ತನೇ ತರಗತಿಯವರೆಗೆ ಯಾವ್ಯಾವ ಶಾಲೆಗಳಲ್ಲಿ ಓದಿರುತ್ತಾರೆ, ಅವರ ಆರ್ಥಿಕ ಸ್ಥಿತಿಗಳೇನು ಎಲ್ಲವನ್ನೂ ನೋಡಿಕೊಂಡು ಗ್ರಾಮೀಣ ಅಭ್ಯರ್ಥಿಗಳ ಜನಸಂಖ್ಯೆಯ ಆಧಾರದ ಮೇಲೆ ಮೀಸಲಾತಿ ಕೊಡುವುದಾದರೆ ನಾವಂತೂ ಅದಕ್ಕೆ ಸಂತೋಷ ಪಡುತ್ತೇವೆ. ಆದರೆ ಇದು ನಮ್ಮ ಕೈಯಲ್ಲಿ ಇಲ್ಲ. ರಾಮಕೃಷ್ಣ ಆಯೋಗದವರು ಏನು ವರದಿ ಕೊಟ್ಟಿದ್ದಾರೆ...

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಸದಸ್ಯರಾದ ಸೋಮಶೇಖರ್‌ರವರು ಈ ಮಸೂದೆ ಬಗ್ಗೆ ಮಾತನಾಡಿದ ನಂತರ ನಾವು ಮತ್ತೆ ಈ ಮಸೂದೆ ಮೇಲಿನ ಚರ್ಚೆಯನ್ನು ನಾಳೆ ಬೆಳಿಗ್ಗೆ ಮುಂದುವರೆಸೋಣ. ಇನ್ನೂ ಬಹಳಷ್ಟು ಜನ ಈ ಮಸೂದೆ ಮೇಲಿನ ಚರ್ಚೆಯಲ್ಲಿ ಪಾಲ್ಗೊಳ್ಳುವವರಿದ್ದಾರೆ. ಮಾನ್ಯ ಅಧ್ಯಕ್ಷರು ನಾಳೆ ಬೆಳಿಗ್ಗೆ ಈ ಚರ್ಚೆಯನ್ನು ಮುಂದುವರೆಸಿದರೆ ಎಲ್ಲರೂ ಮಾತನಾಡಲು ಅನುಕೂಲವಾಗುತ್ತದೆ.

ಅಧ್ಯಕ್ಷರು :— ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಬಿ.ಎ.ಸಿ. ಮೀಟಿಂಗ್‌ನಲ್ಲಿ ಈ ಮಸೂದೆ ಮೇಲಿನ ಚರ್ಚೆಗೆ ಎರಡು ಗಂಟೆಗಳ ಸಮಯವನ್ನು ಮೀಸಲಿಡಲಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೇ, ಜನರಲ್ ರಿಕ್ರೂಟ್‌ಮೆಂಟ್ ರೂಲ್ಸ್, 1977ಗೆ ಸರ್ಕಾರದವರು ಅಮೆಂಡ್‌ಮೆಂಟ್ ತಂದು ಶೇಕಡ 10ರಷ್ಟು ಮೀಸಲಾತಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಇದೇ ರೀತಿಯ ವ್ಯವಸ್ಥೆಯನ್ನು ಸಿ.ಇ.ಟಿ.ಯಲ್ಲೂ ಕೂಡ ಜಾರಿಗೊಳಿಸಲಾಗುತ್ತಿದೆ. ಮಾನ್ಯ ಶಿಕ್ಷಣ ಮಂತ್ರಿಗಳು ಇಲ್ಲೇ ಇದ್ದಾರೆ. ನಾವು ರೂರಲ್ ಕ್ಯಾಂಡಿಡೇಟ್ಸ್‌ಗೆ ಶೇಕಡ 10ರಷ್ಟು ಮೀಸಲಾತಿಯನ್ನು ಕೊಟ್ಟು ಮ್ಯಾಟ್ರಿಕ್ಸ್ ಅನ್ನು ಇಶ್ಯೂ ಮಾಡುತ್ತಿದ್ದೇವೆ. ಆ ಶೇಕಡ 10ರಷ್ಟು ಮೀಸಲಾತಿಯನ್ನು ಎಸ್.ಸಿ., ಎಸ್.ಟಿ. ಮತ್ತು ಹಿಂದುಳಿದ ವರ್ಗಗಳಿಗೆ ಹೀಗೆ ಪ್ರತಿಯೊಂದಕ್ಕೂ ಕೂಡ ನಾವು ಕೊಡುತ್ತಿದ್ದೇವೆ. ಇದಕ್ಕೆ ಮಸೂದೆಯೇ ಬೇಕಾಗುವುದಿಲ್ಲ. ಇದನ್ನೆಲ್ಲಾ ಗೊಂದಲಮಯ ಮಾಡಿಕೊಂಡು ಸರ್ಕಾರವೇನೋ ದೊಡ್ಡ ಸಾಧನೆ ಮಾಡಿದೆ ಎನ್ನುವ ಹಾಗೆ ಈ ಮಸೂದೆ ತಂದು ಜನರನ್ನು ಮರುಳುಗೊಳಿಸತಕ್ಕದ್ದು ಸರಿಯಲ್ಲ. ಇದೇ ನನ್ನ ಪ್ರಶ್ನೆಯಾಗಿದೆ. ಕೇವಲ ಒಂದು ಅಧಿಸೂಚನೆಯನ್ನು ಹೊರಡಿಸಿ ಮೀಸಲಾತಿಯನ್ನು ನೀಡಬಹುದಾಗಿದೆ. ``Indira Sahani" ಕೇಸ್‌ನಲ್ಲಿ ನ್ಯಾಯಾಧೀಶರು if it is within 50% an Executive order can be issued. ಎಂದು ಹೇಳಿದ್ದಾರೆ. ಹೀಗಿರುವಾಗ ರೂಲ್ಸ್‌ಗೆ ಅಮೆಂಡ್‌ಮೆಂಟ್ ತಂದಿರುವುದು ಸರಿಯೇ? ನಾನು ಈಗಾಗಲೇ ಹೇಳಿರುವಂತೆ ಮಹಿಳೆಯರಿಗೆ ಶೇಕಡ 30ರಷ್ಟು, ಎಕ್ಸ್ -ಸರ್ವೀಸ್‌ಮೆನ್‌ಗೆ ಶೇಕಡ 10ರಷ್ಟು, ಪ್ರಾಜೆಕ್ಟ್ ಡಿಸ್‌ಪ್ಲೇಸ್ಡ್ ಪರ್ಸನ್ಸ್‌ಗೆ ಶೇಕಡ 5ರಷ್ಟು ಮೀಸಲಾತಿಯನ್ನು ನಾವು ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಮಾಡಿ ರೂಲ್ಸ್‌ಗೆ ಅಮೆಂಡ್‌ಮೆಂಟ್ ತರುವುದರ ಮೂಲಕ ನೀಡಿದೆವು. ಇದನ್ನು ಆರ್ಟಿಕಲ್ 16(1) ನಲ್ಲಿ ಮಾಡಿದ್ದೇವೆ. ಅದೇ ರೀತಿ ಈಗ ನೀವೇನು ಆರ್ಟಿಕಲ್ 16(1) ರಲ್ಲೇ ನೀವು ಮಾಡಬಹುದಾಗಿತ್ತು. ರೂಲ್ಸ್‌ಗೆ ಅಮೆಂಡ್‌ಮೆಂಟ್ ಮಾಡಿ ನೀವು ಇದನ್ನು ತರಬಹುದಾಗಿತ್ತು. ರಾಮಕೃಷ್ಣ ಆಯೋಗದವರ ವರದಿಯನ್ನು ಸರ್ಕಾರದವರು ಸಂಪೂರ್ಣವಾಗಿ ಒಪ್ಪುವುದಾಗಿದ್ದರೆ, because it exceeds 50% you should have brought the legislation ಆಗ ನಾವು ಅದನ್ನು ಸಂವಿಧಾನದ ಒಂಭತ್ತನೇ ಷೆಡ್ಯೂಲ್‌ನಲ್ಲಿ ಸೇರಿಸಬೇಕು ಎಂದು ಒತ್ತಾಯಿಸಬಹುದಾಗಿತ್ತು. ಈಗ ತಂದಿರುವ ಶೇಕಡ 10ರಷ್ಟು ಮೀಸಲಾತಿ ಬದಲಾಗಿ ಸರ್ಕಾರ ಜನಸಂಖ್ಯೆ ಆಧಾರದ ಮೇಲೆಯೇ ಮೀಸಲಾತಿಯನ್ನು ಕೊಡಬಹುದಾಗಿತ್ತು. ಆದರೆ ಸರ್ಕಾರ ಅದನ್ನು ಮಸೂದೆ ಆಧಾರದ ಮೇಲೆಯೇ ಮೀಸಲಾತಿಯ ಒಳಗೇ ನೀಡಲು ಉದ್ದೇಶಿಸಿ ಮಸೂದೆ ಮಂಡಿಸಿದೆ. ಅಂದರೆ ಸರ್ಕಾರ ಹಾರಿಜಾಂಟಲ್ ರಿಸರ್ವೇಷನ್ ಕೊಡಲು ಉದ್ದೇಶಿಸಿ ಈ ಮಸೂದೆ ತಂದಿದೆ. ಹಾರಿಜಾಂಟಲ್ ರಿಸರ್ವೇಷನ್ ಅಂದರೆ ಎಸ್.ಸಿ. ಎಸ್.ಟಿ. ಪಿ.ಹೆಚ್. ಜೆ.ಎಂ., ಬಿ.ಸಿ.ಎಂ. ಹೀಗೆ ಪ್ರತಿಯೊಂದರಲ್ಲೂ ಶೇಕಡ 10ರಷ್ಟು ಮೀಸಲಾತಿ ಗ್ರಾಮೀಣದವರಿಗೆ ಹೋಗುತ್ತದೆ. ಹೊಸದಾಗಿ ಏನೂ ಸರ್ಕಾರದವರೂ ಮೀಸಲಾತಿ ನೀಡುತ್ತಿಲ್ಲ. ಸರ್ಕಾರ ಕೇವಲ ಒಂದು ಅಧಿಸೂಚನೆ ಹೊರಡಿಸುವುದರಿಂದ ಮೀಸಲಾತಿ ನೀಡಬಹುದಾಗಿತ್ತು. ಅದಕ್ಕಾಗಿ 6 ತಿಂಗಳುಗಳ ಕಾಲ ನೇಮಕಾತಿಗಳನ್ನು ಸ್ಥಗಿತಗೊಳಿಸಿ ಜನರಲ್ಲಿ ಗೊಂದಲ ಉಂಟು ಮಾಡುವ ಅಗತ್ಯ ಇರಲಿಲ್ಲ. ಸರ್ಕಾರ ಏನೋ ಮಸೂದೆಯೊಂದನ್ನು ತಂದು ಗ್ರಾಮೀಣರಿಗೆ ಮೀಸಲಾತಿ ನೀಡುತ್ತಿದೆ ಎಂದು ಜನರನ್ನು ಗೊಂದಲದಲ್ಲಿ ಇಡುವಂತಹ ಅವಶ್ಯಕತೆಯೇ ಇರಲಿಲ್ಲ. ಈಗ ನೀವೇನು ತರುತ್ತಿದ್ದೀರಿ,

it could have been dome by mere amendment to the Rules. The Minister is empowered to amend the Rules. In certain cases, even the Cabinet is empowered to amend the Rules. ರೂಲ್ಸ್ ಅನ್ನು ಅಮೆಂಡ್ ಮಾಡುವುದಕ್ಕಾಗಿ ನೀವು ಆ್ಯಕ್ಟ್ ತರುತ್ತಿದಿದೀರಲ್ಲಾ? ಒಂದು ವರ್ಷದಿಂದ ಅತ್ತೂ ಕರೆದು ಸರ್ಕಾರ ಏನೋ ದೊಡ್ಡ ಸಾಧನೆ ಮಾಡುತ್ತದೆ ಎಂದು ಹೇಳಿಕೊಂಡು ಈಗ ಇದನ್ನು ತಂದಿದ್ದೀರಲ್ಲಾ? ಇದರ ಬಗ್ಗೆ ನೀವು ಅಡ್ವೊಕೇಟ್ ಜನರಲ್ ಅಥವಾ ಕಾನೂನು ಕಾರ್ಯದರ್ಶಿಯವರನ್ನು ಕನ್‌ಸಲ್ಟ್ ಮಾಡಿದ್ದೀರಾ? ಈ ರೀತಿ ಆ್ಯಕ್ಟ್ ತರುವಂತೆ ಸರ್ಕಾರದವರಿಗೆ ಯಾರು ಹೇಳಿದ್ದು? 1977ರ ಸಾಮಾನ್ಯ ನೇಮಕಾತಿ ಮಿಯಮಗಳಿಗೆ ನೀವು ಇಲ್ಲಿ ತಿದ್ದುಪಡಿಯನ್ನು ತಂದಿದ್ದೀರಿ. ರೂಲ್ಸ್‌ಗೆ ಅಮೆಂಡ್‌ಮೆಂಟ್ ತರುವುದಕ್ಕೆ ಹೊಸ ಆ್ಯಕ್ಟ್‌ವೊಂದನ್ನು ತರುತ್ತಾರೆಯೇ? ಈ ಬಗ್ಗೆ ಹಿರಿಯರಾದ ಮಾನ್ಯ ರಂಗನಾಥ್‌ರವರೂ ಯೋಚಿಸಲಿಲ್ಲವೇ? ಒಂದು

*7.30 ಪಿ.ಎಂ.*

ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡುವುದಕ್ಕೆ ಆ್ಯಕ್ಟ್ ಏನಾದರೂ ತರುತ್ತಾರೆಯೇ? ತರುವ ಅವಶ್ಯಕತೆ ಇಲ್ಲ ಜನಸಂಖ್ಯಾಧಾರದ ಮೇಲೆ ಮೀಸಲಾತಿ ತೆಗೆದುಕೊಂಡು ಬನ್ನಿ. ಬೇಕಾದರೆ ಈ ಬಗ್ಗೆ ಭಾರತ ಸರ್ಕಾರಕ್ಕೆ ಬರಿಯೋಣ. ತಮಿಳುನಾಡಿನಲ್ಲಿ ಜಯಲಲಿತಾರವರು ತಮ್ಮ ರಾಜಕೀಯ ಶಕ್ತಿಯನ್ನು ಬಳಸಿ ಶೇಕಡ 60ರಷ್ಟು ಮೀಸಲಾತಿ ತಂದರು. ಇದನ್ನು ತಮ್ಮ ಪ್ರಭಾವ ಬಳಸಿ ಮೈಯಿನ್ ಷೆಡ್ಯೂಲ್‌ನಲ್ಲಿ ಸೇರಿಸತಕ್ಕಂಥ ಪ್ರಯತ್ನ ಮಾಡಿ ಅದರಲ್ಲಿ ಯಶಸ್ವಿಯಾಗಿದ್ದಾರೆ. ಅದೇ ರೀತಿ ನೀವು ಮಾಡಿ ಬೇಕಾದರೆ ನಾವು ನೀವು ಎಲ್ಲರೂ ನಿಯೋಗ ಹೋಗೋಣ. ಜನಸಂಖ್ಯಾಧಾರದ ಮೇಲೆ ನೀವು 20 ಪರ್ಸೆಂಟ್ ಮೀಸಲಾತಿ ಮಾಡಿ ನಾವೆಲ್ಲರೂ ಹೋಗೋಣ. ನೀವು 120 ಪರ್ಸೆಂಟ್ ಹಾರಿಜಾಂಟಲ್ ಮೀಸಲಾತಿಗೆ ರೂಲ್ಸ್‌ಗೆ ಅಮೆಂಡ್‌ಮೆಂಟ್ ಮಾಡುವುದನ್ನು ಬಿಟ್ಟುಬಿಟ್ಟು ಕಾಯಿದೆ ಎಂದು ಇಷ್ಟೆಲ್ಲಾ ತೊಂದರೆ ಏಕೆ ಮಾಡುತ್ತೀರಿ? ಇವತ್ತು ತಾವು ಇದನ್ನು ವಿತ್‌ಡ್ರಾ ಮಾಡಿಕೊಳ್ಳಿ, ರೂಲ್ಸ್‌ಗೆ ಅಮೆಂಡ್‌ಮೆಂಟ್ ಮಾಡಿಕೊಳ್ಳಿ ಇದಕ್ಕೆ ಆ್ಯಕ್ಟ್ ತರುವಂಥ ಅವಶ್ಯಕತೆ ಏನೂ ಇಲ್ಲ. ನೀವು ಎಕ್ಸಾಮಿನ್ ಮಾಡಿ ಇದರಲ್ಲಿ ತಪ್ಪು ಇದ್ದರೆ ಹೇಳಿ. I will abide by what you say. If it can be done by mere amendment to the Rules, why all this excercise? ಜನಸಂಖ್ಯಾಧಾರದ ಮೇಲೆ ಮಾಡುವುದಾದರೆ, I will be the first person to support it.

ಶ್ರೀ ಎಸ್.ಎಸ್. ಪಾಟೀಲ್ :— ಅವರು ಒಪ್ಪಿಗೊಂಡು ನಾಳೆ ದಿವಸ ಕಾಯಿದೆ ತರುವುದಕ್ಕೆ ಹೋಗಿ ಮತ್ತೆ ಅದಕ್ಕೆ ಆಕ್ಷೇಪಣೆ ಕಾಲ್ ಮಾಡಬೇಕು, ಹೀಗಾಗಿ ಪುನ: ಅದು ಮೂರು ತಿಂಗಳು ಕಾಲ ಸಮಯ ತೆಗೆದುಕೊಳ್ಳುತ್ತದೆ.

ಶ್ರೀ ಬಿ. ಸೋಮಶೇಖರ್ :— ನಾನು ಮಂತ್ರಿಗಳಾಗಿದ್ದಾಗ ಬೇಕಾದಷ್ಟು ರೂಲ್ಸ್‌ಗಳನ್ನು ಅಮೆಂಡ್ ಮಾಡಿದ್ದೇವೆ. ಈಗ ನೀವು ಆ್ಯಕ್ಟ್ ತರುತ್ತೀರಿ ಎಂದರೂ ಅದಕ್ಕೆ ನೀವು ಅಮೆಂಡ್‌ಮೆಂಟ್ ಮಾಡಬೇಕು. This excercise of bringing an amendment to

the legislation is not required. ಪುನ: ಮೂರು ತಿಂಗಳು ಬೇಕಾಗುತ್ತದೆ. ನೀವು ಇದನ್ನು ಮೊದಲೇ ಮಾಡಬಹುದಾಗಿತ್ತು.

ಶ್ರೀ ಎಸ್. ಎಸ್. ಪಾಟೀಲ್ :— ಅದು ಒಂದು ಕಡೆ ಇರಲಿ, ಅದರೆ ನಾನು ಏನು ಹೇಳುತ್ತೇನೆಂದರೆ, ಈಗ ನೀವು ತಿಂದಿರುವ ಶೇಕಡ 40ರ ಮೀಸಲಾತಿ, ಈಗಿರುವ ಶೇಕಡ 50ರ ಮೀಸಲಾತಿಯ ಒಳಗೆ ಇದೆ. ಇದಕ್ಕಿಂತಲೂ ಮೇಲೆ ಏನೂ ಹೋಗುವುದಿಲ್ಲ. ಇದ್ನೇ ಹಳ್ಳಿಯ ಪರ್ಸಂಟೇಜ್ ಪ್ರಕಾರ ಕೊಡಿ. ಬೇಕಾದರೆ 10 ಇರುವುದನ್ನು 70 ಮಾಡಿ.

ಶ್ರೀ ವೈ.ಕೆ. ರಾಮಯ್ಯ :— ಮಾನ್ಯ ಅಧ್ಯಕ್ಷರೆ, ಯಾವುದಕ್ಕೆ ಪ್ರಥಮ ಆದ್ಯತೆ ಸಿಕ್ಕಬೇಕೋ ಅದಕ್ಕೆ ಕೊನೆಯ ಆದ್ಯತೆ ಸಿಗುವುದು ಅತ್ಯಂತ ನೋವಿನ ವಿಷಯ. ಬೆಲೆ ಕುಸಿತದ ಬಗ್ಗೆ ರಾತ್ರಿ 8 ಗಂಟೆಗೆ ಚರ್ಚೆ, ಹಳ್ಳಿ ಮಕ್ಕಳಿಗೆ ಕೃಪಾಂಕ ಕೊಡುವುದರ ಬಗ್ಗೆ ರಾತ್ರಿ 8 ಗಂಟೆಗೆ ಚರ್ಚೆ. ಇಲ್ಲಿ ಯಾರೂ ಅಧಿಕಾರಿಗಳು ಇರುವುದಿಲ್ಲ ಅಲ್ಲಿ ಪತ್ರಿಕೆಯವರು ಇರುವುದಿಲ್ಲ. ನಮಗೆ ಕೇಳಲಿಕ್ಕೆ ಇಷ್ಟವಿಲ್ಲ, ಇಲ್ಲಿ ನೋಡುವಂಥ ಜನರು ಇಲ್ಲ; ಏಕೆ ತಮ್ಮಲ್ಲೂ ಕೂಡ ಈ ಅನ್ಯಾಯ? ಆದ್ದರಿಂದ ನನ್ನ ಪ್ರಾರ್ಥನೆ ಏನೆಂದರೆ, ಇವತ್ತಿ ಇಲ್ಲಿಗೆ ಮುಗಿಸಿ ನಾಳೆ ಪ್ರಥಮ ಆದ್ಯತೆ ಕೊಟ್ಟು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನನ್ನ ಪ್ರಾರ್ಥನೆ.

ಅಧ್ಯಕ್ಷರು :— ಆಯಿತು ನಾಳೆಗೆ ತೆಗೆದುಕೊಳ್ಳೋಣ. ಈಗ ಒಂದು ಪ್ರಕಟಣೆ ಇದೆ.

## (7) ಪ್ರಕಟಣೆ

ದಿನಾಂಕ 22-11-2000ದಂದು ನಡೆದ ಬಿ.ಎ.ಸಿ.ಯಲ್ಲಿ ವಿಧಾನ ಸಭೆಯ ಕಾರ್ಯಕಲಾಪಗಳನ್ನು ದಿನಾಂಕ 23-11-2000 ಹಾಗೂ 24-11-2000 ರಂದು ನಡೆಸಲು ತೀರ್ಮಾನಿಸಲಾಗಿರುತ್ತದೆ. ದಿನಾಂಕ 23-11-2000ದಂದು ಸದನ ಬೆಳಿಗ್ಗೆ 10-00ಗಂಟೆಗೆ ಹಾಗೂ ದಿನಾಂಕ 24-11-2000ದಂದು ಬೆಳಿಗ್ಗೆ 9-30ಕ್ಕೆ ಸೇರಿ ಮಧ್ಯಾಹ್ನ 1-00 ಗಂಟೆಯವರೆಗೆ ಸಭೆ ಸೇರಲು ತೀರ್ಮಾನವಾಗಿದೆ. ಈಗ ಸಭೆ ಮುಕ್ತಾಯಗೊಂಡು ನಾಳೆ ಬೆಳಿಗ್ಗೆ 10-00 ಗಂಟೆಗೆ ಸೇರುತ್ತದೆ.

(ಸದನವು ಸಂಜೆ ಏಳು ಗಂಟೆ ಮುವತ್ತೂರು ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 23-11-2000ರ ಗುರುವಾರದಂದು ಬೆಳಿಗ್ಗೆ 10-00ಗಂಟೆಗೆ ಸೇರಲು ನಿಶ್ಚಯಿಸಿತು)

---

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)